# ಸರ್ಕಾರಿ ಪ್ರೌಢಶಾಲೆ ಹಾರೋಸೋಮನಹಳ್ಳಿ.

ಚನ್ನರಾಯಪಟ್ಟಣ.ತಾ. ಹಾಸನ ಜಿ.

## 2018-19 ನೇ ಸಾಲಿನ ಒಂದು ಅಂಕದ ಪ್ರಶ್ನೋತ್ತರಗಳು

# ಪರೀಕ್ಷಾ ಸ್ಫೂರ್ತಿ

( ವಿದ್ಯಾರ್ಥಿಗಳ ಸಾಧನೆಗೊಂದು ಸ್ಫೂರ್ತಿ)

ರಚನೆ :
ಶ್ರೀ ದೇವರಾಜು ಸಿ.ಇ
ಸಹಶಿಕ್ಷಕರು
ಸರ್ಕಾರಿ ಪ್ರೌಢಶಾಲೆ ಹಾರೋಸೋಮನಹಳ್ಳಿ
ಚನ್ನರಾಯಪಟ್ಟಣ ತಾ. ಹಾಸನ ಜಿಲ್ಲೆ.

DEVARAJU C E

## ಇತಿಹಾಸ

## ಅಧ್ಯಾಯ-2 ಬ್ರಿಟೀಷ್ ಆಳ್ವಿಕೆಯ ವಿಸ್ತರಣೆ :

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಬ್ರಿಟಷರು ಪ್ಲಾಸಿ ಮತ್ತು ಬಕ್ಸಾರ್ ಕದನಗಳ ಮೂಲಕ ಯಾವ ಪ್ರಾಂತ್ಯದ ಮೇಲೆ ಸಂಪೂರ್ಣ ರಾಜಕೀಯ ನಿಯಂತ್ರಣ ಸಾಧಿಸಿದರು? **ಬಂಗಾಳ**

2. ಮೊದಲ ಆಂಗ್ಲೋ-ಮರಾಠ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? **ಸಾಲ್‌ಬಾಯ್**

3. ಮೊದಲ ಆಂಗ್ಲೋ-ಮರಾಠ ಯುದ್ಧದ ನಂತರ ಮರಾಠರ ಪೇಶ್ವೆ ಆಗಿ ನೇಮಕಗೊಂಡವನು ಯಾರು? **ಮಾಧವರಾವ್**

4. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು ಯಾರು? **ಲಾರ್ಡ ವೆಲ್ಲೆಸ್ಲಿ.**

5. ಲಾರ್ಡ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಏಕೆ ಜಾರಿಗೆ ತಂದನು?

□ **ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಲಾರ್ಡ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದನು.**

6. ಲಾರ್ಡ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು ಯಾವಾಗ ಜಾರಿಗೆ ತಂದನು?

□ **ಉತ್ತರ: ಲಾರ್ಡ ವೆಲ್ಲೆಸ್ಲಿ ಸಹಾಯಕ ಸೈನ್ಯ ಪದ್ಧತಿಯನ್ನು 1798ರಲ್ಲಿ ಜಾರಿಗೆ ತಂದನು.**

7. ಬ್ರಿಟಿಷ್ ಈಸ್ಟ ಇಂಡಿಯಾ ಕಂಪೆನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಸೈನಿಕ ಒಪ್ಪಂದ ಯಾವುದು? **ಸಹಾಯಕ ಸೈನ್ಯ ಪದ್ಧತಿ.**

8. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಮೊದಲ ರಾಜ್ಯ ಯಾವುದು? **ಹೈದರಾಬಾದ್ ಸಂಸ್ಥಾನ.**

9. ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ರಾಜ್ಯಗಳು ಯಾವುವು?

□ **ಹೈದರಾಬಾದ್‌ಸಂಸ್ಥಾನ,ಮೈಸೂರು,ಔದ್,ತಂಜಾವೂರು,ಮರಾಠ,ಆರ್ಕಾಟ್,ಪೂನಾ,ಬಿರಾರ್, ಗ್ವಾಲಿಯರ್.**

10. ಎರಡನೇ ಆಂಗ್ಲೋ-ಮರಾಠ ಯುದ್ಧಕ್ಕೆ ಮುಖ್ಯ ಕಾರಣವೇನು?

**ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷ.**

11. ಎರಡನೇ ಆಂಗ್ಲೋ-ಮರಾಠ ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು? **ಬೆಸ್ಸಿನ್ ಒಪ್ಪಂದ**

12. ಹೋಳ್ಕರ್,ಭೋಂಸ್ಲೆ,ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಲು ಕಾರಣವೇನು?

□ **ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನ್ನು ವಿರೋಧಿಸಿ ಹೋಳ್ಕರ್,ಭೋಂಸ್ಲೆ,ಸಿಂಧಿಯಾ ಮೊದಲಾದ ಮರಾಠ ಮನೆತನಗಳು ಒಗ್ಗೂಡಿದರು.**

13. ಸಿಖ್ಖರ ಸೋಲಿಗೆ ಕಾರಣವಾದ ಅವಮಾನಕರ ಒಪ್ಪಂದ ಯಾವುದು? **ಲಾಹೋರ್ ಒಪ್ಪಂದ.**

14. ಲಾಹೋರ್ ಮತ್ತು ಮುಲ್ತಾನ್‌ಗಳಲ್ಲಿ ಬ್ರಿಟಿಷರ ವಿರುದ್ಧ ಪ್ರತಿಭಟನೆಯ ನೇತೃತ್ವ ವಹಿಸಿದ ಪಂಜಾಬಿಗಳು ಯಾರು?

□ **ಚಟ್ಟಾರ್ ಸಿಂಗ್ ಅಟ್ಟಾರಿವಾಲ ಮತ್ತು ಮೂಲರಾಜ್.**

15. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿಕೊಂಡವನು ಯಾರು? **ಲಾರ್ಡ ಡಾಲ್‌ಹೌಸಿ.**

16. ಲಾರ್ಡ ವೆಲ್ಲೆಸ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಮರಳಲು ಕಾರಣವೇನು?

□ **ಅವನ ಯುದ್ಧಪ್ರಿಯ ನೀತಿಯಿಂದ ಕಂಪೆನಿಗೆ ಸಾಲದ ಹೊರೆ ಹೆಚ್ಚಿತು.ಇದರಿಂದ ತೀವ್ರ ಟೀಕೆಗೆ ಒಳಗಾದ ಲಾರ್ಡ ವೆಲ್ಲೆಸ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಮರಳಿದನು.**

17. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತಂದವರು ಯಾರು? **ಲಾರ್ಡ ಡಾಲ್‌ಹೌಸಿ.**

18. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂದರೇನು?

□ **ಯಾವನೇ ಒಬ್ಬ ಭಾರತೀಯ ರಾಜನು ಮಕ್ಕಳಿಲ್ಲದೆ ಮೃತನಾದರೆ,ಅವನು ದತ್ತು ತೆಗೆದುಕೊಂಡಿದ್ದ ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿರಲಿಲ್ಲ.ಇದನ್ನು ದತ್ತು ಮಕ್ಕಳಿಗೆ ಹಕ್ಕಿಲ್ಲ ಎನ್ನುವರು.**

19. ದತ್ತು ಮಕ್ಕಳಿಗೆ ಹಕ್ಕಿಲ ಎಂಬ ನೀತಿಗೆ ಒಳಪಟ್ಟ ರಾಜ್ಯಗಳು ಯಾವುವು?

□ **ಸತಾರ,ಜೈಪುರ,ಸಂಬಲ್‌ಪುರ,ಉದಯ್‌ಪುರ್,ಝಾನ್ಸಿ,ನಾಗಪುರ.**

20. ದತ್ತು ಮಕ್ಕಳಿಗೆ ಹಕ್ಕಿಲ ಎಂಬ ನೀತಿ ಯಾವಾಗ ಜಾರಿಗೆ ಬಂದಿತು? **1848**

## ಅಧ್ಯಾಯ – 3 ಬ್ರಿಟೀಷ್ ಆಳ್ವಿಕೆಯ ಪರಿಣಾಮಗಳು

**ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರ್ತಗಳಿಂದ ಭರ್ತಿಮಾಡಿ.**

1. ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯವನ್ನು ಸ್ಥಾಪಿಸಿದವನು ____________ **(ವಾರನ್ ಹೇಷ್ಟಿಂಗ್ಸ್)**
2. ಸೂಪರಿಂಡೆಂಟೆಂಟ್ ಆಫ್ ಪೊಲೀಸ್ ಹುದ್ದೆಯನ್ನು ಸೃಷ್ಟಿಸಿದವನು ______________ **(ಲಾರ್ಡ್ ಕಾರ್ನ್‌ವಾಲೀಸ್)**
3. ಖಾಯಂ ಜಮೀನ್ದಾರಿ ಪದ್ಧತಿಯನ್ನು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ _________ ರಲ್ಲಿ ಜಾರಿಗೆ ತರಲಾಯಿತು. **(1793)**
4. ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ಧತಿ _____________**(ರೈತವಾರಿ ಪದ್ಧತಿ)**

5. ಆಧುನಿಕ ಶಿಕ್ಷಣದ ಪ್ರಾರಂಭಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ __________ **(ವಾರನ್ ಹೇಸ್ಟಿಂಗ್ಸ್)**
6. ರೆಗ್ಯುಲೇಟಿಂಗ್ ಕಾಯ್ದೆ ____________ ರಲ್ಲಿ ಜಾರಿಗೆ ಬಂದಿತು.**(1773)**

**. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದವರು ಯಾರು? **ಲಾರ್ಡ್ ಕಾರ್ನವಾಲೀಸ್.**
2. ರೆಗ್ಯುಲೇಟಿಂಗ್ ಕಾಯ್ದೆಯನ್ನು ಯಾವಾಗ ಜಾರಿಗೊಳಿಸಲಾಯಿತು ? **1773ರಲ್ಲಿ ಜಾರಿಗೊಳಿಸಲಾಯಿತು.**
3. ರೆಗ್ಯುಲೇಟಿಂಗ್ ಕಾಯ್ದೆಯ ಉದ್ದೇಶವೇನು?  **ಕಂಪನಿಯ ಮೇಲೆ ನಿಯಂತ್ರಣ ಹೇರುವುದು.**
4. ಕಲ್ಕತ್ತಾದಲ್ಲಿ ಫೋರ್ಟ ವಿಲಿಯಂ ಕಾಲೇಜನ್ನು ಸ್ಥಾಪಿಸಿದವರು ಯಾರು? **ಲಾರ್ಡ್ ಕಾರ್ನವಾಲೀಸ್.**
5. ಹಿಂದೂಸ್ಥಾನದಲ್ಲಿರುವ ಪ್ರತಿಯೊಬ್ಬ ಮೂಲ- ನಿವಾಸಿಯೂ ಭ್ರಷ್ಟ' ಎಂದು ಪ್ರತಿಪಾದಿಸಿದವರು ಯಾರು? **ಲಾರ್ಡ್ ಕಾರ್ನವಾಲೀಸ್.**
6. ದಿವಾನಿ ಅದಾಲತ್ ಮತ್ತು ಫೌಜದಾರಿ ಅದಾಲತ್‌ಗಳನ್ನು ಜಾರಿಗೆ ತಂದವರು ಯಾರು? **ವಾರನ್ ಹೇಸ್ಟಿಂಗ್ಸ್**
7. ದಿವಾನಿ ಅದಾಲತ್ ಎಂದರೇನು?  **ನಾಗರೀಕ ನ್ಯಾಯಾಲಯ.**
8. ಫೌಜದಾರಿ ಅದಾಲತ್ ಎಂದರೇನು?  **ಅಪರಾಧ ನ್ಯಾಯಾಲಯ.**
9. ನಾಗರೀಕ ನ್ಯಾಯಾಲಯಗಳು ಯಾರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು?
 ನಾಗರೀಕ ನ್ಯಾಯಾಲಯಗಳು ಯುರೋಪಿನ **ಜಿಲ್ಲಾಧಿಕಾರಿಗಳಅಧ್ಯಕ್ಷತೆಯ**ಲ್ಲಿ ಕಾರ್ಯನಿರ್ವಹಿಸುತ್ತಿದ್ದವು
10. ಪ್ರಥಮತಃ ವ್ಯವಸ್ಥಿತವಾದ ಪೋಲಿಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದವನು ಯಾರು? **ಲಾರ್ಡ್ ಕಾರ್ನವಾಲೀಸ್.**
11. ಸೂಪರಿಡೆಂಟೆಂಟ್ ಆಫ್ ಪೋಲಿಸ್ ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದವನು ಯಾರು? **ಲಾರ್ಡ್ ಕಾರ್ನವಾಲೀಸ್.**
12. ಕೊತ್ವಾಲರ ಕಾರ್ಯಗಳೇನು?  **ಹಳ್ಳಿಗಳ ಮಟದ್ವಲ್ಲಿ ಕಳ್ಳತನ,ಅಪರಾಧಗಳು,ದರೋಡೆಗಳ ನಿಯಂತ್ರಣ**
13. 1902ರ ಪೋಲಿಸ್ ಕಮಿಷನ್ ಕಾಯ್ದೆಯ ಮಹತ್ವವೇನು?
**ವಿದ್ಯಾರ್ಹತೆಯನ್ನು ಪಡೆದವರನ್ನು ಅಧಿಕಾರಿ ಹುದ್ದೆಗೆ ನೇಮಿಸುವ ಅವಕಾಶವನ್ನು ಕಲ್ಪಿಸಿತು.**
14. ಬ್ರಿಟಿಷರ ಕಾಲದಲ್ಲಿ ಭಾರತೀಯರಿಗೆ ಲಭಿಸುತ್ತಿದ್ದ ಅತ್ಯುನ್ನತ ಹುದ್ದೆ ಯಾವುದು?  **ಸುಬೇದಾರ್**
15. ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲು ನೇಮಕವಾದ ಸಮಿತಿ ಯಾವುದು? **. ಪೀಲ್ ಸಮಿತಿ.**
16. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವರು ಯಾರು? **ಲಾರ್ಡ್ ಕಾರ್ನವಾಲೀಸ್**
17. ಖಾಯಂ ಜಮೀನ್ದಾರಿ ಪದ್ಧತಿ ಎಂದರೇನು?
 **ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದ ಹೊಸ ಕಂದಾಯ ಪದ್ಧತಿಯನ್ನು ಖಾಯಂ ಜಮೀನ್ದಾರಿ ಪದ್ಧತಿ ಎನ್ನುವರು.**
18. ,ಭಾರತದ ರೈತರು ಸಾಲದಲ್ಲೆ ಹುಟ್ಟಿ ಸಾಲದಲ್ಲೇ ಬದುಕಿ ಸಾಲದಲ್ಲೇ ಸತ್ತರು ಎಂದವರು ಯಾರು ? **ಚಾರ್ಲ್ಸ್ ಮೆಟಕಾಫ್.**
19. ಭಾರತದ ರೈತರು ಸಾಲದಲ್ಲೇ ಹುಟ್ಟಿ,ಸಾಲದಲ್ಲೇ ಬದುಕಿ,ಸಾಲದಲ್ಲೇ ಸಾಯಲು ಕಾರಣವೇನು? **ಬ್ರಿಟಿಷ್ ಭೂಕಂದಾಯ ನೀತಿ.**
20. ಮಹಲ್ ಎಂದರೇನು?  **ಮಹಲ್ ಎಂದರೆ ತಾಲ್ಲೂಕು.**
21. ಮಹಲ್‌ವಾರಿ ಪದ್ಧತಿಯನ್ನು ಪ್ರಯೋಗಿಸಿದವರು ಯಾರು? **ಆರ್.ಎಂ.ಬರ್ಡ ಮತ್ತು ಜೇಮ್ಸ್ ಥಾಮ್ಸನ್**
22. ರೈತವಾರಿ ಪದ್ಧತಿಯನ್ನು ಮೊದಲು ಜಾರಿಗೊಳಿಸಿದವನು ಯಾರು? **ಅಲೆಗ್ಸಾಂಡರ್ ರೀಡ್.**
23. ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಎಲ್ಲಿ ಜಾರಿಗೊಳಿಸಲಾಯಿತು?
 **ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಲ್ ಪ್ರಾಂತ್ಯದಲ್ಲಿ ಜಾರಿಗೊಳಿಸಲಾಯಿತು.**
24. ರೈತವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದವನು ಯಾರು?
 **ರೈತವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದವನು ಥಾಮಸ್ ಮನ್ರೋ.**
25. ಯಾವ ಪದ್ಧತಿಯಿಂದ ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದರು?
 **ರೈತವಾರಿ ಪದ್ಧತಿಯಿಂದ ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದರು.**
26.ಆಧುನಿಕ ಶಿಕ್ಷಣ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ಯಾರು? **ವಾರನ್ ಹೇಸ್ಟಿಂಗ್ಸ್.**
27. ಕಲ್ಕತ್ತಾ ಮದರಸಾವನ್ನು ಪ್ರಾರಂಭಿಸಿದವರು ಯಾರು? **ವಾರನ್ ಹೇಸ್ಟಿಂಗ್ಸ್.**
28. ಬನಾರಸ್ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದವರು ಯಾರು? **ಜೋನಾಥನ್ ಡಂಕನ್.**
29. ಬ್ರಿಟಿಷ್ ಶಿಕ್ಷಣದ ವ್ಯಾಪಕ ವಿಸ್ತರಣೆಗೆ ಮೊದಲು ಒತ್ತಾಯಿಸಿದವರು ಯಾರು? **ಚಾರ್ಲ್ಸ್ ಗ್ರಾಂಟ್.**
30. ಗವರ್ನರ್ ಜನರಲ್‌ನ ಕಾರ್ಯಾಂಗ ಸಭೆಗೆ ಕಾನೂನು ಸದಸ್ಯನನ್ನಾಗಿ ಯಾರನ್ನು ನೇಮಕ ಮಾಡಲಾಯಿತು? **ಮೆಕಾಲೆ**
31. ಸಾರ್ವಜನಿಕ ಶಿಕ್ಷಣ ಸಮಿತಿಯ ಅಧ್ಯಕ್ಷರು ಯಾರು? **ಮೆಕಾಲೆ.**
32. ಆಧುನಿಕ ಭಾರತ ಶಿಕ್ಷಣ ವ್ಯವಸ್ಥೆಗೆ ತಳಹದಿ ಯಾವುದು? **ಮೆಕಾಲೆ ವರದಿ**
33. ,ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ,ಅಭಿಪ್ರಾಯ,ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲೀಷರಾಗಿಸುವ (ಭಾರತೀಯ ವಿದ್ಯಾವಂತ ವರ್ಗದ )ಕಲ್ಪನೆ ಯಾರ ಯೋಜನೆ ಆಗಿತ್ತು? **ಮೆಕಾಲೆ.**
34. ಕಲ್ಕತ್ತಾ,ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿದವನು ಯಾರು? **ಲಾರ್ಡ್ ಡಾಲ್‌ಹೌಸಿ**
35. ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ,ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು ಶಿಫಾರಸ್ಸು



DEVARAJU CE

ಮಾಡಿದವರು ಯಾರು? **ಸರ್ ಚಾರ್ಲ್ಸ್ ವುಡ್ಸ್ ಆಯೋಗ.**

36. ರೆಗ್ಯುಲೇಟಿಂಗ್ ಶಾಸನ ಯಾವಾಗ ಜಾರಿಗೆ ಬಂದಿತು?  **ರೆಗ್ಯುಲೇಟಿಂಗ್ ಶಾಸನ 1773ರಲ್ಲಿ ಜಾರಿಗೆ ಬಂದಿತು.**

37. ಈಸ್ಟ್ ಇಂಡಿಯಾ ಕಂಪೆನಿಯಿಂದ ಬ್ರಿಟೀಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು ,ಅಪರಾಧ ತೆರಿಗೆ' ಎಂದು ತೀಕ್ಷವಾಗಿ ಟೀಕಿಸಿದವನು ಯಾರು? **ಎಡ್ಮಂಡ್ ಬರ್ಕ**

38. ಯಾವ ಶಾಸನದ ಮೇರೆಗೆ ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟನ್ನು ಸ್ಥಾಪನೆ ಮಾಡಲಾಯಿತು?  **ರೆಗ್ಯುಲೇಟಿಂಗ್ ಶಾಸನ**

39. ಪಿಟ್ಸ್ ಇಂಡಿಯಾ ಕಾಯ್ದೆ ಯಾವಾಗ ಜಾರಿಗೆ ಬಂತು?  **ಪಿಟ್ಸ್ ಇಂಡಿಯಾ ಕಾಯ್ದೆ 1784 ರಲ್ಲಿ ಜಾರಿಗೆ ಬಂತು.**

40. ನಿಯಂತ್ರಣ ಮಂಡಳಿಯ ಸ್ಥಾಪನೆಗೆ ಅವಕಾಶ ನೀಡಿದ ಕಾಯ್ದೆ ಯಾವುದು? **ಪಿಟ್ಸ್ ಇಂಡಿಯಾ ಕಾಯ್ದೆ**

41. ಭಾರತದಲ್ಲಿದ್ದ ಕಂಪೆನಿಯ ಅಧೀನದ ಪ್ರದೇಶಗಳಿಗೆ ಇಂಗ್ಲೆಂಡಿನ ಸರ್ಕಾರವೇ ಅಂತಿಮ ಸಾರ್ವಭೌಮ ಎಂದು ಘೋಷಣೆ ಮಾಡಿದ ಕಾಯ್ದೆ ಯಾವುದು? **ಪಿಟ್ಸ್ ಇಂಡಿಯಾ ಕಾಯ್ದೆ**

42. ಚರ್ಚಗಳಿಗೆ ಭಾರತಕ್ಕೆ ಪ್ರವೇಶ ಮಾಡಲು ಅಧಿಕೃತ ಅವಕಾಶವನ್ನು ನೀಡಿದ ಶಾಸನ ಯಾವುದು? **1813ರ ಚಾರ್ಟರ್ ಕಾಯ್ದೆ**

43. ಬಂಗಾಳದ ಗವರ್ನರ್ ಜನರಲ್‌ನನ್ನು ಭಾರತದ ಗವರ್ನರ್ ಜನರಲ್ ಆಗಿ ನಾಮಕರಣ ಮಾಡಿದ ಶಾಸನ ಯಾವುದು? **1833ರ ಚಾರ್ಟರ್ ಕಾಯ್ದೆ**

44. ಗವರ್ನರ್ ಜನರಲ್ ಪದನಾಮವನ್ನು ಬದಲಾಯಿಸಿ ವೈಸರಾಯ್ ಎಂಬ ಪದನಾಮ ನೀಡಿದ ಶಾಸನ ಯಾವುದು?' **ಭಾರತ ಸರ್ಕಾರದ ಕಾಯ್ದೆ–1858**

45.ಭಾರತದ ಮೊದಲ ವೈಸರಾಯ್ ಯಾರು?  **ಭಾರತದ ಮೊದಲ ವೈಸರಾಯ್ ಲಾರ್ಡ ಕ್ಯಾನಿಂಗ್**

46. 1909 ಭಾರತೀಯ ಪರಿಷತ್ ಕಾಯ್ದೆಯ ಮತ್ತೊಂದು ಹೆಸರೇನು? **ಮಿಂಟೊ ಮಾರ್ಲೆ ಸುಧಾರಣಾ ಕಾಯ್ದೆ**

47. ಪ್ರತ್ಯೇಕ ಚುನಾವಣಾ ಮತಗಟ್ಟೆ ವ್ಯವಸ್ಥೆಯನ್ನು ಜಾರಿಗೆ ತಂದ ಶಾಸನ ಯಾವುದು? 1909 **ಭಾರತೀಯ ಪರಿಷತ್ ಕಾಯ್ದೆ**

48. 1919 ಭಾರತೀಯ ಪರಿಷತ್ ಕಾಯ್ದೆಯ ಮತ್ತೊಂದು ಹೆಸರೇನು? **ಮಾಂಟೆಗೂ–ಚೆಮ್ಸ್‌ಫರ್ಡ ಸುಧಾರಣಾ ಕಾಯ್ದೆ**

49. ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಭಾರತೀಯರನ್ನು ಯುದ್ಧದಲ್ಲಿ ಬ್ರಿಟಿಷರ ಪರವಾಗಿ ಭಾಗವಹಿಸಲು ಪ್ರೇರೇಪಿಸಿದ ಹಿನ್ನಲೆಯಲ್ಲಿ ಜಾರಿಗೆ ತರಲಾದ ಶಾಸನ ಯಾವುದು?  **1919 ಭಾರತೀಯ ಪರಿಷತ್ ಕಾಯ್ದೆ**

50. ,ಭಾರತೀಯರಿಗೆ ಹಂತಹಂತವಾಗಿ ಜವಾಬ್ದಾರಿ ಸರ್ಕಾರವನ್ನು ನೀಡುವುದೇ ಬ್ರಿಟಿಶ್ ಸರಕಾರದ ಗುರಿ' ಎಂದು ಘೋಷಿಸಿದವರು ಯಾರು?  **ಮಾಂಟೆಗೋ**

51. ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರ ಪದ್ಧತಿಗೆ ಅವಕಾಶ ನೀಡಿದ ಶಾಸನ ಯಾವುದು?  **1919 ಭಾರತೀಯ ಪರಿಷತ್ ಕಾಯ್ದೆ**

52.ಭಾರತದ ಸಂವಿಧಾನ ರಚನೆಗೆ ಬುನಾದಿಯಾದ ಶಾಸನ ಯಾವುದು?  **1935ರ ಭಾರತ ಸರ್ಕಾರದ ಕಾಯ್ದೆ**

53.ಭಾರತೀಯ ರಿಸರ್ವ ಬ್ಯಾಂಕ್ ಸ್ಥಾಪನೆಗೆ ಅವಕಾಶ ನೀಡಿದ ಶಾಸನ ಯಾವುದು?  **1935ರ ಭಾರತ ಸರ್ಕಾರದ ಕಾಯ್ದೆ**

54. ಭಾರತದಲ್ಲಿ ಫೆಡರಲ್ ಕೋರ್ಟ ಸ್ಥಾಪನೆಗೆ ಅವಕಾಶ ನೀಡಿದ ಶಾಸನ ಯಾವುದು?  **1935ರ ಭಾರತ ಸರ್ಕಾರದ ಕಾಯ್ದೆ**

## ಅಧ್ಯಾಯ–4 ಕರ್ನಾಟಕದಲ್ಲ ಬ್ರಿಟೀಷ್ ಆಳ್ವಿಕೆಯ ಪ್ರತಿರೋಧಗಳು

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**

1. ಮೊದಲನೆಯ ಆಂಗ್ಲೋ ಮೈಸೂರು ಯುದ್ಧ ________ ಮತ್ತು ________ರ ನಡುವೆ ನಡೆಯಿತು. **(ಹೈದರ್ ಅಲಿ ಮತ್ತು ಬ್ರಿಟಿಷರ)**
2. ಎರಡನೆಯ ಆಂಗ್ಲೋ ಮೈಸೂರು ಯುದ್ಧವು ______ ಒಪ್ಪಂದದೊಂದಿಗೆ ಕೊನೆಗೊಂಡಿತು.**(ಮದ್ರಾಸ್)**
3. ಕಿತ್ತೂರು ಚೆನ್ನಮ್ಮ ________ ಎಂಬ ಹುಡುಗನನ್ನು ದತ್ತು ಪಡೆದಿದ್ದಳು. **(ಶಿವಲಿಂಗಪ್ಪ)**
4. ಕಿತ್ತೂರು ಚೆನ್ನಮ್ಮನ ಸಂಸ್ಥಾನದ ರಾಯಣ್ಣನ ಊರು __________ . **(ಸಂಗೊಳ್ಳಿ)**
5. ಸುರಪುರವು ಈಗಿನ _________ ಜಿಲ್ಲೆಯಲ್ಲಿದೆ. **(ಯಾದಗಿರಿ)**
6. ಈಗಿನ ಬಾಗಲಕೋಟೆ ಜಿಲ್ಲೆಯ __________ ಬೇಡರು ಬ್ರಿಟಿಶರ ವಿರುದ್ಧ ದಂಗೆಯೆದ್ದಿದ್ದರು.**(ಹಲಗಲಿ)**
7. ಅಮರ ಸುಳ್ಯ ಬಂಡಾಯವು ಮೂಲತಃ __________ ಬಂಡಾಯ **(ರೈತ ಬಂಡಾಯ)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಭಾರತದ ಚರಿತ್ರೆಯಲ್ಲಿ 18ನೇ ಶತಮಾನವನ್ನು ಏನೆಂದು ಚಿತ್ರಿಸಲಾಗಿದೆ? **ರಾಜಕೀಯ ಸಮಸ್ಯೆಗಳ ಶತಮಾನ**
2. ಭಾರತದ ಚರಿತ್ರೆಯಲ್ಲಿ 18ನೇ ಶತಮಾನವನ್ನು ರಾಜಕೀಯ ಸಮಸ್ಯೆಗಳ ಶತಮಾನ ಎಂದು ಚಿತ್ರಿಸಲಾಗಿದೆ.ಏಕೆ? **ಮೊಘಲ್ ಚಕ್ರವರ್ತಿ ಔರಂಗಜೇಬನ ಮರಣ 1707ರಲ್ಲಿ ಸಂಭವಿಸಿದ್ದು.**
3. ಮೊದಲನೆಯ ಆಂಗ್ಲೋ ಮೈಸೂರು ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಯಾಯಿತು? **ಮದ್ರಾಸ್ ಒಪ್ಪಂದ**
4. ಎರಡನೆಯ ಆಂಗ್ಲೋ ಮೈಸೂರು ಯುದ್ಧಕ್ಕೆ ಮುಖ್ಯ ಕಾರಣವೇನು?  **ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು**
5. ಎರಡನೆಯ ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ಹೈದರಾಲಿ ಯಾವ ಕದನದಲ್ಲಿ ಪರಾಭವಗೊಂಡನು? **ಪೋರ್ಟೋನೋವೆ**
6. ಎರಡನೆಯ ಆಂಗ್ಲೋ ಮೈಸೂರು ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಯಾಯಿತು? **ಮಂಗಳೂರು ಒಪ್ಪಂದ**
7. ಬ್ರಿಟಿಷರನ್ನು ಸತತವಾಗಿ ಕಾಡಿದ ಏಕೈಕ ಭಾರತೀಯ ರಾಜ ಯಾರು? **ಟಿಪ್ಪು ಸುಲ್ತಾನ.**
8. ಮೂರನೇ ಆಂಗ್ಲೋ ಮೈಸೂರು ಯುದ್ಧಕ್ಕೆ ಮುಖ್ಯ ಕಾರಣವೇನು? **ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆ.**

9. ಮೂರನೇ ಆಂಗ್ಲೋ ಮೈಸೂರು ಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಯಾಯಿತು? **ಶ್ರೀರಂಗಪಟ್ಟಣ ಒಪ್ಪಂದ**
10. ವಾಘ್ ಎಂದರೇನು? **ವಾಘ್ ಎಂದರೆ ಹುಲಿ.**
11. ರಾಣಿ ಚೆನ್ನಮ್ಮಳ ದತ್ತು ಪುತ್ರ ಯಾರು? **ರಾಣಿ ಚೆನ್ನಮ್ಮಳ ದತ್ತು ಪುತ್ರ ಶಿವಲಿಂಗಪ್ಪ.**
12. ಇಂದಿಗೂ ಕನ್ನಡ ನಾಡಿಗೆ ಆದರ್ಶಪ್ರಾಯಳಾಗಿರುವವರು ಯಾರು? **ಚೆನ್ನಮ್ಮ**
13. ಸಂಗೊಳ್ಳಿ ರಾಯಣ್ಣನನ್ನು ಎಲ್ಲಿ ಗಲ್ಲಿಗೇರಿಸಲಾಯಿತು? **ಸಂಗೊಳ್ಳಿ ರಾಯಣ್ಣನನ್ನು ನಂದಗಡದಲ್ಲಿ ಗಲ್ಲಿಗೇರಿಸಲಾಯಿತು.**
14. ಅಮರ ಸುಳ್ಯದ ಬಂಡಾಯದ ಕೇಂದ್ರ ಸ್ಥಾನಗಳು ಯಾವುವು? **–ಸುಳ್ಯ,ಬೆಳ್ಳಾರೆ,ಪುತೂರ್ತು.**
15. ಸುರಪುರ ಬಂಡಾಯದ ನಾಯಕ ಯಾರು? **ವೆಂಕಟಪ್ಪ ನಾಯಕ.**
16. ಕೊಪ್ಪಳ ಬಂಡಾಯದ ನಾಯಕ ಯಾರು? **ಕೊಪ್ಪಳ ಬಂಡಾಯದ ನಾಯಕ ವೀರಪ್ಪ.**
17. ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಏಕೆ ಸಿಡಿದೆದ್ದರು? **ಶಸ್ತ್ರಾಸ್ತ್ರ ನಿಷೇಧ ಕಾಯಿದೆಯ ವಿರುದ್ಧ**
**( ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ದರಿರಲಿಲ್ಲ. ಆದ್ದರಿಂದ ಬ್ರಿಟಿಷರ ವಿರುದ್ಧ ಸಿಡಿದೆದ್ದರು.)**
18. ಸುರಪುರ ಈಗಿನ ಯಾವ ಜಿಲ್ಲೆಯಲ್ಲಿದೆ? **ಸುರಪುರ ಈಗಿನ ಯಾದಗಿರಿ ಜಿಲ್ಲೆಯಲ್ಲಿದೆ.**
19.ಯಾರ ಮರಣವು ಮೈಸೂರು ರಾಜ್ಯದ ಮೇಲೆ ದುಷ್ಪರಿಣಾಮ ಬೀರಿತು– **ಚಿಕ್ಕದೇವರಾಜ ಒಡೆಯರ್**
20.ಅಮರ ಸುಳ್ಯ ಬಂಡಾಯದ ಕೇಂದ್ರ ಸ್ಥಾನಗಳು **–ಸುಳ್ಯ,ಬೆಳ್ಳಾರೆ,ಪುತ್ತೂರು**
21.ಕಿತ್ತೂರು ಚೆನ್ನಮ್ಮ ಬ್ರಿಟಿಷರ ವಿರುದ್ಧ ಬಂಡೇಳಲು ಕಾರಣ **–ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ**
22.ಕಿತ್ತೂರುಸಂಸ್ಥಾನದ ರಾಯಣ್ಣನ ಊರು– **ಸಂಗೊಳ್ಳಿ**

## ಅಧ್ಯಾಯ – 6 ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

**ಬಿಟ್ಟಿರುವ ಸ್ಥಳವನ್ನು ಸೂಕ್ತಉತ್ತರದಿಂದ ತುಂಬಿರಿ.**
1. 1857ರ ದಂಗೆಯನ್ನು ಬ್ರಿಟಿಷ್ ಇತಿಹಾಸಕಾರರು __________ ಎಂದು ಕರೆದಿದ್ದಾರೆ. **(ಸಿಪಾಯಿ ದಂಗೆ)**
2. ಡಾಲ್ ಹೌಸಿಯು ಜಾರಿಗೆ ತಂದ ನೀತಿ __________ . **(ದತ್ತು ಮಕ್ಕಳಿಗೆ ಹಕ್ಕಿಲ್ಲ)**
3. 1857ರ ದಂಗೆಯ ಸಮಯದಲ್ಲ ಬ್ರಿಟಿಶ್ ಅಧಿಕಾರಿಯನ್ನು ಕೊಂದವನು ________**(ಮಂಗಲ್ ಪಾಂಡೆ)**
4.ಝಾನ್ಸಿ ರಾಣಿಯು ಬ್ರಿಟೀಷರ ವಿರುದ್ಧದ ಯುದ್ಧದಲ್ಲ __________ ನ್ನು ವಶಕ್ಕೆ ಪಡೆದಳು **(ಗ್ವಾಲಿಯರ್)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**
1. 1857ರ ದಂಗೆಯನ್ನು ಭಾರತೀಯ ಇತಿಹಾಸಕಾರರು ಏನೆಂದು ಕರೆದಿದ್ದಾರೆ? **ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ**
2. 1857ರ ದಂಗೆಯನ್ನು ಇಂಗ್ಲಿಷ್ ಇತಿಹಾಸಕಾರರು ಏನೆಂದು ಕರೆದಿದ್ದಾರೆ? **ಸಿಪಾಯಿ ದಂಗೆ**
3. ಡಾಲ್ ಹೌಸಿಯು ಜಾರಿಗೆ ತಂದ ನೀತಿ ಯಾವುದು? **ದತ್ತು ಮಕ್ಕಳಿಗೆ ಹಕ್ಕಿಲ್ಲ**
4. 1857ರ ದಂಗೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು ಯಾರು? **ಮಂಗಲ ಪಾಂಡೆ**
5. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ಧದ ಯುದ್ದದಲ್ಲಿ ಯಾವ ಪ್ರದೇಶವನ್ನು ವಶಕ್ಕೆ ಪಡೆದಳು? **ಗ್ವಾಲಿಯರ್**
6. 1857ರ ದಂಗೆಯ ಸಮಯದಲ್ಲಿ ಕಾನ್ಪುರದಲ್ಲಿ ದಂಗೆಯ ನೇತೃತ್ವವನ್ನು ವಹಿಸಿದವರು ಯಾರು? **ನಾನಾ ಸಾಹೇಬ**
7. 1857ರ ದಂಗೆಯ ಸಮಯದಲ್ಲಿ ಬ್ರಿಟಿಷರು ತಂದ ನವೀನ ಬಂದೂಕು ಯಾವುದು? **ರಾಯಲ್ ಎನ್‌ಫೀಲ್ಡ್**
8. ಮಂಗಲ ಪಾಂಡೆಯನ್ನು ಏಕೆ ಗಲ್ಲಿಗೇರಿಸಲಾಯಿತು?
**ಮಂಗಲ ಪಾಂಡೆ ಬ್ರಿಟಿಷ್ ಅಧಿಕಾರಿಯನ್ನು ಕೊಂದನು ಆದ್ದರಿಂದ ಮಂಗಲ ಪಾಂಡೆಯನ್ನು ಗಲ್ಲಿಗೇರಿಸಲಾಯಿತು.**
9. ನಾನಾ ಸಾಹೇಬನ ಸಹಾಯಕನ ಹೆಸರೇನು? **ತಾತ್ಯಾಟೋಪಿ**

## ಅಧ್ಯಾಯ – 7 ಸ್ವಾತಂತ್ರ್ಯ ಹೋರಾಟ

**ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.**
1. ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು ________ ರಲ್ಲಿ ಸ್ಥಾಪಿಸಲಾಯಿತು. **(1885)**
2. ಸಂಪತಿನ್ತ ಸೋರುವಿಕೆ ಸಿದ್ಧಾಂತವನ್ನು ತಿಳಿಸಿದವರು ____________ **(ದಾದಾಬಾಯಿ ನವರೋಜಿ)**
3. ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು ________ರವರು ಘೋಷಿಸಿದರು. **(ಬಾಲಗಂಗಾಧರ ತಿಲಕ)**
4. ಬಾ-ಗಂಗಾಧರ ತಿ-ಕರು ಮರಾಠಿ ಭಾಷೆಯಲ್ಲ _________ ಪತ್ರಿಕೆಯನ್ನು ಪ್ರಕಟಿಷದರು. **(ಕೇಸರಿ)**
5. ಅಭಿನವ ಭಾರತ ಎಂಬ ರಹಸ್ಯ ಸಂಘಟನೆಯನ್ನು _________ ಗಳು ಹೊಂದಿದ್ದರು. **(ಕ್ರಾಂತಿಕಾರಿಗಳು)**



DEVARAJU CE

**II. ಕೆಳಗಿನ ಪ್ರಶ್ನೆಗಳಿಗೆ ಒಂದು ಉತ್ತರಿಸಿ.**

1. 'ಭಾರತ ರಾಷ್ಟ್ರೀಯ ಕಾಂಗ್ರೇಸ್'ನ್ನು ಯಾವಾಗ ಸ್ಥಾಪನೆ ಮಾಡಲಾಯಿತು? **1885**
2. 'ಭಾರತ ರಾಷ್ಟ್ರೀಯ ಕಾಂಗ್ರೇಸ್' ಯಾವ ರಾಷ್ಟ್ರೀಯ ಸಮಾವೇಷದಲ್ಲಿ ಹುಟ್ಟಿಕೊಂಡಿತು ? **ಬಾಂಬೆ**
3. "ಭಾರತ ರಾಷ್ಟ್ರೀಯ ಕಾಂಗ್ರೇಸ್" ಮೊದಲ ಅಧ್ಯಕ್ಷರು ಯಾರು? **W.C ಬ್ಯಾನರ್ಜಿ**
4. 'ಭಾರತ ರಾಷ್ಟ್ರೀಯ ಕಾಂಗ್ರೇಸ್'ನ ಸ್ಥಾಪಕರು ಯಾರು? **ಎ.ಓ.ಹ್ಯೊಂ**
5. 'ಮಂದಗಾಮಿ ಯುಗ' ಎಂದರೇನು?

 **ಸಾಂಪ್ರದಾಯಿಕವಾಗಿ 'ಭಾರತ ರಾಷ್ಟ್ರೀಯ ಕಾಂಗ್ರೇಸ್'ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿ ಯುಗ' ಎನ್ನುತ್ತಾರೆ.**

6. ಮಂದಗಾಮಿ ನಾಯಕರುಗಳನ್ನು ಹೆಸರಿಸಿ.

 **W.C ಬ್ಯಾನರ್ಜಿ, ಎಂ.ಜಿ. ರಾನಡೆ, ಸುರೇಂದ್ರನಾಥ ಬ್ಯಾನರ್ಜಿ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ**

7 ಸಂಪತ್ತಿನ ಸೋರುವಿಕೆ ಸಿದ್ಧಾಂತ'ದ ಪ್ರತಿಪಾದಕರು ಯಾರು? **ದಾದಾಬಾಯಿ ನವರೋಜಿ**

8. ಸಂಪತ್ತಿನ ಸೋರುವಿಕೆ ಸಿದ್ಧಾಂತ ಎಂದರೇನು?

 **ಭಾರತದ ಸಂಪತ್ತು ಯಾವ ರೀತಿಯಲ್ಲಿ ಇಂಗ್ಲೆಂಡಿಗೆ ಸೋರಿ ಹೋಗುತ್ತಿದೆ. ಎಂಬುದನ್ನು ಅಂಕಿ ಅಂಶಗಳೊಂದಿಗೆ ದಾದಾಬಾಯಿ ನವರೋಜಿಯವರು ವಿವರಿಸಿದರು ಅದನ್ನು 'ಸಂಪತ್ತಿನ ಸೋರುವಿಕೆ ಸಿದ್ಧಾಂತ" ಎಂದು ಕರೆದರು.**

9. ತೀವ್ರವಾದಿಗಳು ಯಾರನ್ನು ರಾಜಕೀಯ ಭಿಕ್ಷುಕರು ಎಂದು ಕರೆದರು? **ಮಂದಗಾಮಿಗಳನ್ನು**
10. ತೀವ್ರವಾದಿ ನಾಯಕರುಗಳನ್ನು ಹೆಸರಿಸಿ.

 **ಅರಬಿಂದೋ ಘೋಷ್, ಬಿಪಿನ್‌ಚಂದ್ರ ಪಾಲ್, ಲಾಲಜಪತ ರಾಯ್ ಮತ್ತು ಬಾಲಗಂಗಾಧರ್ ತಿಲಕ್**

11. ಬಂಗಾಳದ ವಿಭಜನೆಯನ್ನು ಮಾಡಿದವರು ಯಾರು? **ಲಾರ್ಡ ಕರ್ಜನ್**
12. ಬಂಗಾಳದ ವಿಭಜನಗೆ ಮುಖ್ಯ ಕಾರಣವೇನು?

 **ಬಂಗಾಸವು ತೀವ್ರ ಸ್ವರೂಪದ ಬ್ರಿಟೀಷ್ ವಿರೋಧಿ ಭಾವನೆ ಮತ್ತು ಚಟುವಟಿಕೆಗಳ ಕೇಂದ್ರವಾಗಿತ್ತು. ಇದನ್ನು ಹತಿಕ್ಕಲು ಬಂಗಾಳವನ್ನು ವಿಭಜಿಸಲಾಯಿಸಲಾಯಿತು.**

13. ಬಂಗಾಳದ ವಿಭಜನೆಯನ್ನು ಯಾವಾಗ ಮಾಡಲಾಯಿತು? **1905**
14. "ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು ಅದನ್ನು ಪಡೆದೇ ತೀರುವೆ' ಎಂದು ಘೋಷಿಸಿದವರು ಯಾರು? **ಬಾಲಗಂಗಾಧರ ತಿಲಕ್**
15. ಬಾಲಗಂಗಾಧರ ತಿಲಕ್‌ರು ಆರಂಭಿಸಿದ ಪತ್ರಿಕೆಗಳು ಯಾವುವು?

 **ತಿಲಕರು ಮರಾಠಿ ಭಾಷೆಯಲ್ಲ 'ಕೇಸರಿ' ಮತ್ತು ಇಂಗ್ಲೀಷ್ ಭಾಷೆಯಲ್ಲ 'ಮರಾಠ' ಪತ್ರಿಕೆಗಳನ್ನು ಆರಂಭಿಸಿದರು.**

16. 'ಗೀತಾರಹಸ್ಯ' ಎಂಬ ಗ್ರಂಥವನ್ನು ರಚಿಸಿದವರು ಯಾರು?  **ಬಾಲಗಂಗಾಧರ ತಿಲಕ್**
17. ಇಂಗ್ಲೆಂಡಿನ ಗುಪ್ತ ಸಂಘಟನೆಗಳನ್ನು ಹೆಸರಿಸಿ. **ಲೋಟಸ್ ಮತ್ತು ಡಾಗರ್**
18. ಕ್ರಾಂತಿಕಾರಿ ನಾಯಕರುಗಳನ್ನು ಹೆಸರಿಸಿ.

**ವಿ.ಡಿ. ಸಾವರ್ಕರ್, ಅರಬಿಂದೋ ಘೋಷ್, ಅಶ್ವಿನಿಕುಮಾರದತ್ತ ರಾಜನಾರಾಯಣ ಬೋಸ್, ರಾಜಗುರು, ರಾಸ್ ಬಿಹಾರಿ ಬೋಸ್, ಮ್ಯಾಡಮ್ ಕಾಮಾ, ಖುದಿರಾಮ್ ಬೋಸ್, ರಾಮ್‌ಪ್ರಸಾದ ಬಿಸ್ಮಿಲ್, ಅಶ್ವಖುಲಾಖ್ಲಾನ್, ಭಗತ್ ಸಿಂಗ್, ಚಂದ್ರಶೇಖರ ಅಜಾದ್ ಜತಿನ್ ದಾಸ್**

19.ಲಾರ್ಡ ಲಿಟ್ಟನ್ ಪ್ರತಿಕಾ ಸ್ವಾತಂತ್ರ್ಯ ಮೊಟಕುಗೊಳಿಸಲು ಯಾವ ಕಾಯ್ದೆ ಜಾರಿಗೊಳಿಸಿದನು ? **ವರ್ಣಾಕ್ಯೂಲರ್ ಪ್ರೆಸ್ ಕಾಯ್ದೆ**

20..ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಸ್ಥಾಪನೆಯ ಉದ್ದೇಶ **–ರಾಷ್ಟ್ರೀಯ ಐಕ್ಯತೆ ಸಾಧಿಸುವುದು**

## ಅಧ್ಯಾಯ –10 20 ನೆಯ ಶತಮಾನದ ರಾಜಕೀಯ ಆಯಾಮಗಳು :

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸರಿಯಾದ ಉತ್ತರಗಳಿಂದ ಭರ್ತಿ ಮಾಡಿರಿ.**

1. ರಷ್ಯಾದಲ್ಲ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಿದವರು __________**(ಲೆನಿನ್)**
2. ಮೊದಲನೇ ಮಹಾಯುದ್ಧವು __________ ರಲ್ಲಿ ಅಂತ್ಯಗೊಂಡಿತು.**(1918)**
3. ಫ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ದವನು __________ . **(ಮುಸೋಲಿನಿ)**
4. ಎರಡನೆಯ ಮಹಾಯುದ್ಧವು ____________ ರಲ್ಲಿ ಆರಂಭವಾಯಿತು.**(1939)**
5. ಅಮೆರಿಕಾದ ನೌಕಾ ಕೇಂದ್ರವಾಗಿದ್ದ ______ಮೇಲೆ ಜಪಾನ್ ದಾಳಿ ಮಾಡಿತು. **(ಪರ್ಲ ಹಾರ್ಬರ್)**

**II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :**

1. ಕದನ ಬಾಂಧವ್ಯತ್ರಯ ಮೈತ್ರಿಕೂಟವನ್ನು ಮಾಡಿಕೊಂಡ ದೇಶಗಳು ಯಾವುವು? **ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ**
2. ಕದನ ಸೌಹಾರ್ದತ್ರಯ ಮೈತ್ರಿಕೂಟವನ್ನು ಮಾಡಿಕೊಂಡ ದೇಶಗಳು ಯಾವುವು? **ಜರ್ಮನಿ, ಆಸ್ಟ್ರಿಯಾ–ಹಂಗೇರಿ ಮತ್ತು ಇಟಲಿ**
3. ಮೊದಲ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?

 **ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ**



DEVARAJU CE

4. ಮೊದಲ ಮಹಾಯುದ್ಧದ ಸಮಯದಲ್ಲಿ ರಷ್ಯಾ ಹಿಂದೆ ಸರಿಯಲು ಕಾರಣವೇನು?
 **ರಷ್ಯಾದಲ್ಲ ಉಂಟಾದ ಸಮಾಜವಾದಿ ಕ್ರಾಂತಿಯಿಂದಾಗಿ ರಷ್ಯಾ ಯುದ್ಧದಿಂದ ಹಿಂದೆ ಸರಿಯಿತು**
5. ಮೊದಲ ಮಹಾಯುದ್ಧ ಯಾವ ಒಪ್ಪಂದದೊಂದಿಗೆ ಕೊನೆಗೊಂಡಿತು?  **ವರ್ಸೈಲ್ಸ್ ಒಪ್ಪಂದ**
6. ಮೊದಲ ಮಹಾಯುದ್ಧದ ನಂತರ ಆರಂಭಗೊಂಡ ಸಂಸ್ಥೆ ಯಾವುದು?  **ರಾಷ್ಟ್ರಸಂಘ**
7. ರಷ್ಯಾವನ್ನು ಆಳುತಿದ್ದ ದೊರೆಗಳನ್ನು ಏನೆಂದು ಕರೆಯುತಿದ್ದರು? **ಝಾರ್**
8. 1905ರಲ್ಲಿ ರಷ್ಯಾದಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಪ್ರತಿರೋಧ ಉಂಟಾಗಲು ಕಾರಣವೇನು?
 **1905ರಲ್ಲ ಜಪಾನ್‌ನಂತಹ ಪುಟ್ಟ ದೇಶ ರಷ್ಯಾವನ್ನು ಸೋಲಿಸಿತು.**
9. ರಷ್ಯಾದ ಕೊನೆಯ ದೊರೆ ಯಾರು?  **ಎರಡನೆಯ ನಿಕೋಲಸ್.**
10. ರಷ್ಯಾದ ಲ್ಲ 'ಫೆಬ್ರವರಿ ಕ್ರಾಂತಿ' ನಂತರ ಅಧಿಕಾರವನ್ನು ಯಾರು ಪಡೆದುಕೊಂಡರು?  **'ಮೆನ್ಶವಿಕ್'**
11. ರಷ್ಯಾದ ಜನರಿಗೆ ´ ಶಾಂತಿ, ಆಹಾರ, ಭೂಮಿ' ಎಂಬ ಜನಪರ ಘೋಷಣೆಗಸನ್ನು ನೀಡಿದವರು ಯಾರು?  **ಲೆನಿನ್**
12. 'ಅಕ್ಟೋಬರ್ ಕ್ರಾಂತಿ' ಎಂದರೇನು?
 **ಲೆನಿನ್ ಕ್ರಾಂತಿ ಪಡೆಯನ್ನುಸೇರಿ ಅಕ್ಟೋಬರ್ 7 ರಂದು ರಷ್ಯಾವನ್ನುಸಮಾಜವಾದಿ ಗಣರಾಜ್ಯ ಎಂದು ಘೋಷಣೆ ಮಾಡಿದರು. ಇದನ್ನೆ ರಷ್ಯಾದ 'ಅಕ್ಟೋಬರ್ ಕ್ರಾಂತಿ' ಎನ್ನುತ್ತಾರೆ.**
13. ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದವರು ಯಾರು?  **ಜೋಸೆಫ್ ಸ್ಟಾಲಿನ್**
14. ಜಗತಿನ್ತ ಮೊದಲ ಗಗನಯಾತ್ರಿ ಯಾರು?  **ಯೂರಿಗಗಾರಿನ್**
15. ಭಾರತವು ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳ ಮಾದರಿಯನ್ನು ಯಾವ ದೇಶದಿಂದ ಪಡೆಯಿತು?  **ರಷ್ಯಾ**
16. ಸೋವಿಯತ್ ಒಕ್ಕೂಟದ ಅಧ್ಯಕ್ಷರಾದ ಗೋರ್ಬಚೆವ್ ಜಾರಿಗೆ ತಂದ ಸುಧಾರಣೆಗಳು ಯಾವುವು?
 **ಗಾಸ್ಲ್‌ನೋಸ್_ತ್ಮತ್ತು ಪೆರೆಸ್ತ್ರೋಯಿಕ**
17. ರಷ್ಯಾದಲ್ಲ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಗಲು ಕಾರಣವೇನು?
 **ಗಾಸ್ಲ್‌ನೋಸ್_ತ್ಮತ್ತು ಪೆರೆಸ್ತ್ರೋಯಿಕ ಎಂಬ ಸುಧಾರಣೆಗಳಿಂದ ರಷ್ಯಾದಲ್ಲ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಯಿತು.**
18. ಫ್ಯೂರರ್ ಎಂದು ಯಾರನ್ನು ಕರೆಯುವರು?  **ಫ್ಯೂರರ್ ಎಂದು ಹಿಟರ್ಲ್‌ನನ್ನು ಕರೆಯುವರು.**
19. ಹಿಟರ್ಲ್ ಆರಂಭಿಸಿದ ರಾಜಕೀಯ ಪಕ್ಷ ಯಾವುದು?  **ನಾಜಿ ಪಕ್ಷ**
20. 'ಗೋಬೆಲ್ಸ್' ಎಂದರೆ ಯಾರು?
 **ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಹಿಟ್ಲರನು ನೇಮಿಸಿದ ವಿಶೇಷವಾದ ಮಂತ್ರಿಯನ್ನು 'ಗೋಬೆಲ್ಸ್' ಎನ್ನುವರು.**
21. ಹಿಟರ್ಲ್ ಆರಂಭಿಸಿದ ಕ್ರೌರ್ಯಪಡೆಯ ಹೆಸರೇನು?  **'ಬೂದು ಅಂಗಿದಳ'**
22. 'ಬೂದು ಅಂಗಿದಳ'ದ ಉದ್ದೇಶವೇನು?  **ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸುವುದು**
23. ಹೊಲೊಕಾಸ್ಟ್ ಎಂದರೇನು?  **ಹಿಟರ್ಲನ ಸಾಮೂಹಿಕ ಕಗ್ಗೊಲೆಗಳನ್ನು ಹೊಲೊಕಾಸ್ಟ್ ಎಂದು ಕರೆಯುವರು.**
24. 'ಕಾನ್ಸೆಂಟ್ರೇಷನ್ ಕ್ಯಾಂಪ್ಸ್' ಎಂದರೇನು?  **ಊಟ, ನೀರು ಯಾವುದನ್ನೂ ನೀಡದೆ ಗುಲಾಮರ ರೀತಿಯಲ್ಲ ದುಡಿಸಿಕೊಳ್ಳುವುದನ್ನು 'ಕಾನ್ಸೆಂಟ್ರೇಶನ್ ಕ್ಯಾಂಪ್ಸ್' ಎನ್ನುವರು.**
25. ಮುಸೋಲಿನಿ ಆರಂಭಿಸಿದ ಪಕ್ಷ ಯಾವುದು?  **ರಾಷ್ಟ್ರೀಯ ಪ್ಯಾಸಿಸ್ಟ್ ಪಕ್ಷ'**
26. ಆಕ್ಸೀಸ್ ಬಣದ ದೇಶಗಳನ್ನು ಹೆಸರಿಸಿ.  **ಜರ್ಮನಿ, ಇಟಲಿ ಮತ್ತು ಜಪಾನ್**
27. ಆಲೀಸ್ ಬಣದ ದೇಶಗಳನ್ನು ಹೆಸರಿಸಿ.  **ಬ್ರಿಟನ್, ಫ್ರಾನ್ಸ್, ರಷ್ಯಾ**
28. ಚೀನಾದ ಕ್ಯೊಮಿಂಟಾಂಗ್ ಪಕ್ಷದ ನಾಯಕ ಯಾರು?  **ಸನ್-ಯಾತ್-ಸೆನ್**
29. ಜಗತಿನ್ತ ಮಿಲಟರಿ ಕಾರ್ಯವ್ಯಹದಲ್ಲೇ ಅತ್ಯಂತ ವಿಶಿಷ್ಟವಾದ ಪ್ರಯೋಗ ಯಾವುದು?  **ಕಮ್ಯುನಿಸ್ಟರ ದೀರ್ಘ ಪಯಣ**
30. ಚೀನಾದಲ್ಲಿ ದೀರ್ಘ ಪಯಣವನ್ನು ಆರಂಭಿಸಿದವರು ಯಾರು?  **ಮಾವೋತ್ಸೆ ತುಂಗ**
31.ಶೀತಲ ಸಮರ ಎಂದರೇನು?
 **ಎರಡನೆಯ ಮಹಾಯುದ್ಧದ ನಂತರ ಜಾಗತಿಕವಾಗಿ ಎರಡು ಬಣಗಳ ನಡುವೆ ರಾಜಕೀಯ, ಆರ್ಥಿಕ, ಮಿಲಿಟರಿ ಮುಂತಾದ ವಿಷಯಗಳಲ್ಲ ಉದ್ಭವಿಸಿದ ನಿರಂತರ ಭಯ, ದ್ವೇಷ, ಅಸೂಯೆ ಮತ್ತು ಆತಂಕದ ಪರಿಸ್ಥಿತಿಯೇ ಶೀತಲ ಸಮರ.**
32. ಶೀತಲ ಸಮರ ಯಾವ ದೇಶಗಳ ನಡುವೆ ನಡಯಿತು?  **ಅಮೆರಿಕ ಮತ್ತು ರಷ್ಯಾ**
33. ಅಮೇರಿಕಾ ದ್ವಿತೀಯ ಮಹಾಯುದ್ಧವನ್ನು ಪ್ರವೇಶಿಸಲು ಕಾರಣವೇನು?
 **ದ್ವಿತೀಯ ಮಹಾಯುದ್ಧದ ಸಮಯದಲ್ಲಿ ಜಪಾನ್ ಅಮೆರಿಕಾದ ನೌಕಾನೆಲೆ ಪರ್ಲ್‌ಹಾರ್ಬರ್ ಮೇಲೆ ದಾಳಿ ನಡೆಸಿತು.**

## ರಾಜ್ಯಶಾಸ್ತ್ರ

## ಅಧ್ಯಾಯ – 2 ಭಾರತದ ವಿದೇಶಾಂಗ ನೀತಿ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ಭಾರತದ ವಿದೇಶಾಂಗ ನೀತಿಯನ್ನು ರೂಪಿಸಿದವರು _____ (ಜವಾಹರ್‌ಲಾಲ್ ನೆಹರು)
2. ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯನ್ನು __________ ಎನ್ನಬಹುದು. (ಅಲಿಪ್ತ ನೀತಿ)
3. ಭಾರತವು ಸ್ವಾತಂತ್ರ್ಯ ಪೂರ್ವದಲ್ಲಿ __________ ರ ವಸಾಹತು ಶಾಹಿಗೆ ಒಳಗಾಗಿತ್ತು. (ಬ್ರಿಟಿಷರ)

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಸಾರ್ವಭೌಮ ರಾಷ್ಟ್ರ ಎಂದರೇನು?

 **ಒಂದು ರಾಷ್ಟ್ರ ಆಂತರಿಕವಾಗಿ,ಅಥವಾ ಬಾಹ್ಯವಾಗಿ ಯಾಗಲಿ ಇತರೆ ರಾಷ್ಟ್ರಗಳಿಗೆ ಅಧೀನವಾಗಿರದೆ ಸ್ವತಂತ್ರವಾಗಿರುವುದನ್ನು ಸಾರ್ವಭೌಮ ರಾಷ್ಟ್ರ ಎನ್ನುವರು.**

2. ಭಾರತದ ವಿದೇಶಾಂಗ ನೀತಿಯನ್ನು ನೆಹರೂರವರ ವಿದೇಶಾಂಗ ನೀತಿ ಎಂದು ವರ್ಣಿಸಿದ್ದಾರೆ.ಏಕೆ?

 **ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾದ ಜವಾಹರಲಾಲ್ ನೆಹರು ಪ್ರಧಾನ ಮಂತ್ರಿ ಹುದ್ದೆಯ ಜೊತೆಗೆ ವಿದೇಶಾಂಗ ಖಾತೆಯನ್ನೂ ಹೊಂದಿ ಸಮರ್ಥವಾಗಿ ನಿಭಾಯಿಸಿದರು. ಈ ಕಾರಣಗಳಿಂದಾಗಿ ಭಾರತದ ವಿದೇಶಾಂಗ ನೀತಿಯನ್ನು ನೆಹರೂರವರ ವಿದೇಶಾಂಗ ನೀತಿ ಎಂದು ವರ್ಣಿಸಿದ್ದಾರೆ**

3. ಪಂಚಶೀಲ ತತ್ವಗಳಿಗೆ ಯಾವಾಗ ಸಹಿ ಹಾಕಲಾಯಿತು?  **1954**
4. ಪಂಚಶೀಲ ತತ್ವಗಳಿಗೆ ಸಹಿ ಹಾಕಿದವರು ಯಾರು?

 **ಚೀನಾದ ಪ್ರಧಾನಿ ಚೌ.ಎನ್. ಲಾಯ್ ಮತ್ತು ಭಾರತದ ಪ್ರಧಾನಿ ಜವಾಹರಲಾಲ್ ನೆಹರೂ**

5. ದ್ವಿತೀಯ ಮಹಾಯುದ್ಧದ ಬಳಿಕ ವಿಶ್ವವು ಎರಡು ಶಕ್ತಿ ಬಣಗಳಾಗಿ ವಿಭಾಗವಾಗಿತ್ತು.ಅವು ಯಾವುವು?

 **ಅಮೆರಿಕಾ ಮತ್ತು ರಷ್ಯಾ**

6. ವಸಾಹತು ಶಾಹಿತ್ವ ಎಂದರೇನು?

 **ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ತನ್ನಸ್ವಾಧೀನಕ್ಕೆ ತೆಗೆದುಕೊಂಡು ಆ ದೇಶದ ಸಾರ್ವಭೌಮತ್ವವನ್ನು ಹತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗ ಪಡಿಸಿಕೊಳ್ಳುವುದಕ್ಕೆ ವಸಾಹತು ಶಾಹಿತ್ವ ಎಂದು ಕರೆಯುತ್ತಾರೆ.**

7. ಆಫ್ರಿಕಾಗಾಂಧಿ ಎಂದೇ ಪ್ರಸಿದ್ಧರಾದವರು ಯಾರು?  **ನೆಲ್ಸನ್ ಮಂಡೇಲ**
8. ಭಾರತ ಸಂವಿಧಾನವು ತನ್ನ 51ನೇ ವಿಧಿಯ ಮಹತ್ವವೇನು?

 **ಭಾರತ ಸಂವಿಧಾನವು ತನ್ನ 51ನೇ ವಿಧಿಯ ಮೂಲಕ ಅಂತರರಾಷ್ಟ್ರೀಯ ಸಹಬಾಳ್ವೆ ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಗೌರವ ತಂದುಕೊಡುವಂತಹ ವಿದೇಶಾಂಗ ನೀತಿಯನ್ನು ಸೂಚಿಸುತ್ತದೆ.**

9. ನಿಶ್ಯಸ್ತ್ರೀಕರಣ ಎಂದರೇನು?  **ಕೆಲವು ನಿರ್ದಿಷ್ಟ ಬಗೆಯ ಶಸ್ತ್ರಾಸ್ತ್ರಗಳನ್ನು ಹಂತಹಂತವಾಗಿ ಇಲ್ಲವಾಗಿಸುವುದೇ ನಿಸ್ಯಸ್ತ್ರೀಕರಣ.**

1.ದಕ್ಷಣ ಆಫ್ರಿಕಾದಲ್ಲಿ ವರ್ಣಭೇದನೀತಿಯನ್ನು ವಿರೋಧಿಸಿ ಆಫ್ರಿಕಾನ್ ಗಾಂಧಿ ಎಂದು ಪ್ರಖ್ಯಾತಿ ಹೊಂದಿದವರು– **ನೆಲ್ಸನ್ ಮಂಡೇಲಾ**

2.ವಿಶ್ವದ ಯಾವುದೇ ಬಣಕ್ಕೂ ಸೇರದೆ ಇರುವ ನೀತಿಯನ್ನು ಏನೆಂದು ಕರೆಯುವರು– **.ಅಲಿಪ್ತನೀತಿ**

3.ಭಾರತವಿದೇಶಾಂಗ ನೀತಿ ವಸಾಹತುಶಾಹಿತ್ವವನ್ನು ವಿರೋಧಿಸುತ್ತದೆ ಏಕೆ–

**ಆಂಗ್ಲರ ಆಡಳಿತದಿಂದ ವಸಾಹತು ನೀತಿಯನ್ನು ಸ್ವತಃ ಅನುಭವಿಸಿದೆ.**

4.ಸವಾಲಿಗೆ ಸವಾಲಿನ ವಿದೇಶಾಂಗ ನೀತಿಯನ್ನು ಅನುಸರಿಸಿದ ಪ್ರಧಾನಮಂತ್ರಿಗಳು ಯಾರು ?

**ಲಾಲಬಹದ್ದೂರ ಶಾಸ್ತ್ರಿ & ಇಂದಿರಾಗಾಂದಿ**

5.ಆಲಿಪ್ತ ನೀತಿ ಎಂದರೇನು ?

**ದ್ವಿತೀಯ ಮಹಾಯುದ್ದದ ನಂತರ ನಿರ್ಮಾಣವಾದ ಶಕ್ತಿ ಬಣಗಳಲ್ಲಿ ಭಾರತ ಯಾವ ಬಣಕ್ಕೂ ಸೇರದೆ ತಟಸ್ಥವಾಗಿ ಉಳಿದಿರುದಕ್ಕೆ ಅಲಿಪ್ತ ನೀತಿ ಎನ್ನುವರು.**

6.ಪ್ರಪಂಚದ ಯಾವುದೇ ಮೂಲೆಯಲ್ಲಿ ವಸಾಹತುಶಾಹಿತ್ವ ಇರಕೂಡದು ಎಂದು ಭಾರತ ಯಾವ ಸಮ್ಮೇಳನದಲ್ಲಿ ತನ್ನ ನಿಲುವನ್ನು ಪ್ರತಿಪಾದಿಸಿತು ? **ದೆಹಲಿ & ಬಾಡೂಂಗ್ ಏಷ್ಯಾ ಸಮ್ಮೇಳನ**

7.ವರ್ಣಭೇದ ನೀತಿ ಎಂದರೇನು ?

**ಒಂದು ವರ್ಣದ ಜನಸಮುದಾಯ ಇನ್ನೊಂದು ವರ್ಣದ ಜನಸಮುದಾಯವನ್ನು ಕೀಳು ಎಂದು ಭಾವಿಸುವುದು.**

8.ವರ್ಣಭೇದನೀತಿ ವಿಶ್ವಶಾಂತಿ & ಸಹಬಾಳ್ವೆಗೆ ಮಾರಕ ಹೇಗೆ? **ವರ್ಣಭೇದ ನೀತಿಯಿಂದ ಮಾನವಹಕ್ಕುಗಳ ಉಲ್ಲಂಘನೆಯಾಗುತ್ತದೆ.**



DEVARAJU C E

## ಅಧ್ಯಾಯ – 5 ಜಾಗತಿಕ ಸಂಸ್ಥೆಗಳು

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

1. ವಿಶ್ವಸಂಸ್ಥೆಯ ಪ್ರಾರಂಭವಾದ ವರ್ಷ __________ **(1945)**
2. ವಿಶ್ವಸಂಸ್ಥೆಯ ಮುಖ್ಯ ಕಚೇರಿ __________ ನಗರದಲ್ಲಿದೆ. **(ನ್ಯೂಯಾರ್ಕ)**
3. ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುವ ಮಾದರಿಯಲ್ಲಿರುವ ಅಂಗಸಂಸ್ಥೆ __________ **(ಭದ್ರತಾ ಸಮತಿ)**
4. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಅವಧಿ __________ ವರ್ಷಗಳು **(9)**
5. ಅಂತರರಾಷ್ಟ್ರೀಯ ನ್ಯಾಯಾಲಯವು __________ ಎಂಬಲ್ಲಿ ಇದೆ. **(ಹೇಗ್)**
6. ವಿಶ್ವಸಂಸ್ಥೆಯ ಈಗಿನ ಮಹಾಕಾರ್ಯದರ್ಶಿಯ ಹೆಸರು __________ **(ಅಂಟಾನಿಯೊ ಗುಟೆರೆಸ್)**
7. ವಿಶ್ವಆರೋಗ್ಯಸಂಸ್ಥೆ ಸ್ಥಾಪನೆಯಾದ ವರ್ಷ __________ **(1948)**
8. ಸಾರ್ಕ್ ಸ್ಥಾಪನೆಯಾದ ವರ್ಷ __________ **(1985)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ವಿಶ್ವಸಂಸ್ಥೆಯ ಸ್ಥಾಪನೆಗೆ ಮುಂದಾದವರ ಹೆಸರುಗಳನ್ನು ತಿಳಿಸಿ.
 **ವಿನ್‌ಸ್ಟನ್ ಚರ್ಚಿಲ್, ಜೋಸೆಫ್ ಸ್ಟಾಲಿನ್ ಹಾಗೂ ಪ್ರಾಂಕ್ಲಿನ್ ಡಿ'ರೂಸ್‌ವೆಲ್ಟ್**
2. ಭದ್ರತಾ ಸಮಿತಿಯಲ್ಲನ ಖಾಯಂಸದಸ್ಯ ರಾಷ್ಟ್ರಗಳು ಯಾವುವು?
 **ಅಮೆರಿಕಾ, ರಷ್ಯಾ, ಬ್ರಿಟನ್, ಫ್ರಾನ್ಸ್ ಹಾಗೂ ಚೈನಾ (FACER)**
3. ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯ ಸೂಚಿಯಲ್ಲರುವ ವಿಷಯಗಳಾವುವು?
 **ಜನಸಂಖ್ಯಾ ಸ್ಫೋಟ, ಪರಿಸರ ಸಂರಕ್ಷಣೆ, ಹಸಿವು, ಪೌಷ್ಟಿಕತೆಯ ಕೊರತೆ**
4. SAARC ನ್ನು ವಿಸ್ತರಿಸಿ. – **South Asian Association for Regional co-operation**
5. ಮೊದಲನೆಯ ಮಹಾಯುದ್ಧದ ಬಳಿಕ ಜಾಗತಿಕ ಶಾಂತಿಗಾಗಿ ಯಾವ ಸಂಸ್ಥೆ ಪ್ರಾರಂಭವಾಯಿತು?
 **ಮೊದಲನೆಯ ಮಹಾಯುದ್ಧದ ಬಳಿಕ ಜಾಗತಿಕ ಶಾಂತಿಗಾಗಿ 'ಲೀಗ್ ಆಫ್ ನೇಷನ್ಸ್' ಎಂಬ ಸಂಸ್ಥೆ ಪ್ರಾರಂಭವಾಯಿತು.**
6. 'ಲೀಗ್ ಆಫ್ ನೇಷನ್ಸ್' ಪತನಕ್ಕೆ ಮುಖ್ಯ ಕಾರಣವೇನು?  **ದ್ವಿತೀಯ ಮಹಾಯುದ್ಧದ ಪ್ರಾರಂಭ**
7. ವಿಶ್ವಸಂಸ್ಥೆ ಎಂಬ ಶಬ್ದವನ್ನು ಯಾರು ಚಾಲ್ತಿಗೆ ತಂದರು?  **ಪ್ರಾಂಕ್ಲಿನ್ ಡಿ'ರೂಸ್‌ವೆಲ್ಟ್**
8. ವಿಶ್ವಸಂಸ್ಥೆಯ ಈಗಿನ ಹೆಸರೇನು?  **ವಿಶ್ವ ರಾಷ್ಟ್ರಗಳು**
9. ವಿಶ್ವಸಂಸ್ಥೆ ಯಾವಾಗ ಉದಯವಾಯಿತು?  **1945 ಅಕ್ಟೋಬರ್ 24 ರಂದು ವಿಶ್ವಸಂಸ್ಥೆ ಉದಯವಾಯಿತು.**
10. ಯಾವ ಸಮ್ಮೇಳನದಲ್ಲಿ ವಿಶ್ವಸಂಸ್ಥೆಯ ಸನ್ನದಿಗೆ ಸಹಿ ಹಾಕಲಾಯಿತು?  **ಸ್ಯಾನ್ ಫ್ರಾನ್ಸಿಸ್ಕೋ**
11. ಇಂದು ವಿಶ್ವ ಸಂಸ್ಥೆಯ ಸದಸ್ಯರ ಸಂಖ್ಯೆ ಎಷ್ಟು?  **193**
12. ಯಾವ ವಾಕ್ಯದೊಂದಿಗೆ ವಿಶ್ವಸಂಸ್ಥೆಯ ಪ್ರಸ್ತಾವನೆಯು ಪ್ರಾರಂಭಗೊಳ್ಳುತ್ತದೆ?  **,ವಿಶ್ವದ ಜನಸಮುದಾಯವೆನಿಸಿದ ನಾವು ………….'**
13. ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ವಿಶ್ವ ಸಂಸ್ಥೆಯ ಅಂಗ ಸಂಸ್ಥೆ ಯಾವುದು?  **ಸಾಮಾನ್ಯ ಸಭೆ**
14. ವಿಶ್ವಸಂಸ್ಥೆಯ ಸಚಿವ ಸಂಪುಟ ಯಾವುದು?  **ಭದ್ರತಾ ಸಮಿತಿ**
15. ವಿಟೋ ಅಧಿಕಾರ ಎಂದರೇನು?  **ವಿಟೋ ಅಧಿಕಾರವು ನಿಷೇಧಾತ್ಮಕ ಮತ ಚಲಾವಣೆಯ ಅಧಿಕಾರ**
16. ಸಾಮಾನ್ಯ ಸಭೆಯ ಉಪ ಸಂಸ್ಥೆ ಯಾವುದು?  **ದತ್ತಿ ಸಮಿತಿ**
17. ದತ್ತಿ ಸಮಿತಿಯ ಕಾರ್ಯಕ್ಷೇತ್ರವೂ ಕಡಿಮೆಯಾಗುತ್ತಾ ಸಾಗಿದೆ.ಏಕೆ?
 **ಟ್ರಸ್ಟ್ ಆಶ್ರಯಿತ ಪ್ರದೇಶಗಳ ಸಂಖ್ಯೆ ಕಡಿಮೆಯಾದುದರಿಂದ ಈ ಸಮಿತಿಯ ಕಾರ್ಯಕ್ಷೇತ್ರವೂ ಕಡಿಮೆಯಾಗುತ್ತಾ ಸಾಗಿದೆ**
18. ಈಗ ದತ್ತಿ ಸಮಿತಿ ನಿಷ್ಕ್ರಿಯವಾಗಿದೆ.ಏಕೆ?  **ಏಕೆಂದರೆ ಯಾವುದೇ ದತ್ತಿ ಉಳಿದಿಲ್ಲ.**
19. ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಅಧಿಕಾರದ ಅವಧಿ ಎಷ್ಟು?  **ಇವರ ಅಧಿಕಾರದ ಅವಧಿ ಒಂಬತ್ತು ವರ್ಷಗಳು**
20. ಅಂತರರಾಷ್ಟ್ರೀಯ ನ್ಯಾಯಾಲಯದ ಕೇಂದ್ರ ಕಛೇರಿ ಎಲ್ಲಿದೆ?  **ಹೇಗ್**
21. ಸಚಿವಾಲಯದ ಮುಖ್ಯಸ್ಥರು ಯಾರು?  **ಮಹಾಕಾರ್ಯದರ್ಶಿ**
22. ಸಚಿವಾಲಯದ ಪ್ರಧಾನ ಕಾರ್ಯಾಲಯ ಎಲ್ಲಿದೆ?  **ನ್ಯೂಯಾರ್ಕ್**
23. ವಿಶ್ವ ಸಂಸ್ಥೆಯ ದಿನನಿತ್ಯದ ಆಡಳಿತಾತ್ಮಕ ಕಾರ್ಯ ಯೋಜನೆ ಹಾಗೂ ಸಾಂಸ್ಥಿಕ ಕಾರ್ಯಗಳು ಯಾರ ವ್ಯಾಪ್ತಿಯಲ್ಲಿ ಸೇರಿದೆ?
 **ಸಚಿವಾಲಯ**
24. ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ?  **ರೋಮ್‌ನಲ್ಲಿದೆ**
25. ವಿಶ್ವ ಆರೋಗ್ಯ ಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ?  **ಜಿನೇವಾದಲ್ಲಿದೆ**
26. ಯುನೆಸ್ಕೋ ಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ?  **ಪ್ಯಾರಿಸ್‌ನಲ್ಲಿದೆ**
27. ಮಾನವೀಯ ದೃಷ್ಟಿಕೋನ ಹೊಂದಿದ ಸಂಸ್ಥೆ ಯಾವುದು?  **ಯುನಿಸೆಫ್**

28. ಯುನಿಸೆಫ್ ಶುಭಾಶಯ ಪತ್ರಗಳನ್ನು ನಾವು ಏಕೆ ಕೊಳ್ಳಬೇಕು?
□ **ಶುಭಾಶಯ ಪತ್ರಗಳ ಮಾರಾಟದ ಮೂಲಕ ಈ ಸಂಸ್ಥೆ ಗಳಿಸುವ ಹಣವನ್ನು ಮಕ್ಕಳ ಯೋಗಕ್ಷೇಮಕ್ಕಾಗಿ ವಿನಿಯೋಗಿಸುತಿದ್ದೆ.**
29. ನೋಬೆಲ್ ಬಹುಮಾನ ಗಳಿಸಿದ ಸಂಸ್ಥೆ ಯಾವುದು? □ **ಯುನಿಸೆಫ್**
30. ಐ.ಎಮ್.ಎಫ್ ಮುಖ್ಯ ಕಛೇರಿ ಎಲ್ಲಿದೆ? □ **ವಾಷಿಂಗ್‌ಟನ್‌ನಲ್ಲಿದೆ**
31. ಐ.ಬಿ.ಆರ್.ಡಿ ಇದರ ಮತ್ತೊಂದು ಹೆಸರೇನು? □ **ವಿಶ್ವ ಬ್ಯಾಂಕ್**
32. ಐ.ಬಿ.ಆರ್.ಡಿ ಮುಖ್ಯ ಕಛೇರಿ ಎಲ್ಲಿದೆ? □ **ವಾಷಿಂಗ್‌ಟನ್‌ನಲ್ಲಿದೆ.**
33. ಅಂತರರಾಷ್ಟ್ರಿಯ ಕಾರ್ಮಿಕ ಸಂಘದ ಮುಖ್ಯ ಕಛೇರಿ ಎಲ್ಲಿದೆ? □ **ಜಿನೇವಾದಲ್ಲಿದೆ**
34. ಗ್ಯಾಟ್ ಎಂದರೇನು? □ **'ಸಾಮಾನ್ಯ ವ್ಯಾಪಾರ ಹಾಗೂ ಸುಂಕ ಒಪ್ಪಂದ'**

35. ತೃತೀಯ ಆರ್ಥಿಕ ಆಧಾರ ಸ್ತಂಭ ಎಂದು ಯಾವುದನ್ನು ಕರೆಯುವರು? □ **ವಿಶ್ವ ವ್ಯಾಪಾರ ಸಂಘ**
36. ಸಾರ್ಕ್ ಸಂಸ್ಥೆ ಯಾವಾಗ ಪ್ರಾರಂಭಗೊಂಡಿತು? □ **1985**
37. ಸಾರ್ಕ್ ಸಂಸ್ಥೆಯ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.
□ **ಭಾರತ, ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಮಾಲ್‌ಡೀವ್ಸ್, ಭೂತಾನ್ ಹಾಗೂ ಅಫ್ಘಾನಿಸ್ತಾನ**
38. ಸಾರ್ಕ ಸಂಸ್ಥೆಯ ಪ್ರಗತಿಗೆ ತೊಡಕಾಗಿ ಪರಿಣಮಿಸಿದ ಅಂಶ ಯಾವುದು?
□ **'ಎಲ್ಲಾ ನಿರ್ಣಯಗಳು ಸದಸ್ಯ ರಾಷ್ಟಗಳ ಅವಿರೋಧದ ನೆಲೆಯಲ್ಲೇ ಇರಬೇಕು' ಎಂಬ ಸೂತ್ರ**
39. ಸಾರ್ಕ ಮುಖ್ಯ ಕಛೇರಿ ಎಲ್ಲಿದೆ? □ **ಕಠ್ಮಂಡುವಿನಲ್ಲಿದೆ.**
40. ಯುರೋಪಿಯನ್ ಇಕಾನಾಮಿಕ್ ಕಮ್ಯುನಿಟೀಯ ವಾರಸುದಾರ ಸಂಸ್ಥೆ ಯಾವುದು? □ **ಯುರೋಪಿಯನ್ ಯೂನಿಯನ್**
41. ಆಸಿಯನ್ ಸಂಸ್ಥೆಯ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ. □ ಸಿಂಗಾಪುರ, ಮಲೇಶಿಯಾ, ಇಂಡೋನೇಶ್ಯಾ, ಫಿಲಪೈನ್ಸ್ ಹಾಗೂ ಥೈಲ್ಯಾಂಡ್
42. ಸಾರ್ಕನ (SAARC) ವಿಸ್ತರಣ ರೂಪವನ್ನು ಬರೆಯಿರಿ. **ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಘ**

## ಸಮಾಜಶಾಸ್ತ್ರ

## ಅಧ್ಯಾಯ–01 ಸಾಮಾಜಿಕ ಸ್ತರವಿನ್ಯಾಸ

**I. ಈ ಕೆಳಗಿನ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**
1. ಸಂವಿಧಾನದ________ ವಿಧಿಯು ಅಲ್ಪಸಂಖ್ಯಾತರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ನೀಡಿದೆ.**(30)**
2. ಅಸ್ಪೃಶ್ಯತಾ ಆಚರಣೆಯನ್ನು ಸಂವಿಧಾನದ ___________ ವಿಧಿಯು ನಿಷೇಧಿಸಿದೆ. **(17)**
3. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯು _________ ರಲ್ಲಿ ಜಾರಿಗೆ ಬಂದಿತು. **(1955)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**
1. ಭಾರತದ ಸಂವಿಧಾನದ ವಿಧಿ 39ನೇ ವಿಧಿಯ ಮಹತ್ವವೇನು?
□ **ಭಾರತದ ಸಂವಿಧಾನದ ವಿಧಿ 39ರಲ್ಲಿ ಸರ್ಕಾರಗಳು ಸಾಮಾಜಿಕ ನ್ಯಾಯ ಮತ್ತು ಜನರ ಅಭಿವೃದ್ಧಿ ಅವಕಾಶಗಳನ್ನು ಕುರಿತು ತಿಳಿಸುತ್ತದೆ.**
2. ಭಾರತದ ಸಂವಿಧಾನದ 45ನೇ ವಿಧಿಯ ಮಹತ್ವವೇನು?
□ **ಭಾರತದ 45ನೇ ವಿಧಿ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳುತ್ತದೆ.**
3. ಭಾರತದ ಸಂವಿಧಾನದ 86ನೇ ತಿದ್ದುಪಡಿಯ ಮಹತ್ವವೇನು?
□ **6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು ಎಂದು ಸಂವಿಧಾನದ ವಿಧಿ 21ಎ ನಲ್ಲಿ ತಿಳಿಸಲಾಗಿದೆ.**
4. ಭಾರತದ ಸಂವಿಧಾನದ ಪರಿಚ್ಛೇದ 19 ಏನೆಂದು ಸಾರುತ್ತದೆ?
□ **ಸಂವಿಧಾನದ ಪರಿಚ್ಛೇದ 19 ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬರ ಮೂಲಭೂತ ಹಕ್ಕಾಗಿದೆ ಎಂದು ಸಾರುತ್ತದೆ**
5. ಭಾರತದ ಸಂವಿಧಾನದ 29ನೇ ವಿಧಿಯ ಮಹತ್ವವೇನು?
□ **ಭಾರತದ ಸಂವಿಧಾನದ 29ನೇ ವಿಧಿ ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ ನೀಡುತ್ತದ್ದೆ.**
6. ಭಾರತದ ಸಂವಿಧಾನದ 30ನೇ ವಿಧಿಯ ಮಹತ್ವವೇನು?
□ **ಭಾರತದ ಸಂವಿಧಾನದ 30ನೇ ವಿಧಿ ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ವಿಶೇಷ ಅವಕಾಶಗಳನ್ನು ನೀಡಿದೆ.**
7. ಭಾರತದ ಸಂವಿಧಾನದ 46ನೇ ವಿಧಿ ಏನೆಂದು ಹೇಳುತದ್ದೆ?
□ **ಸಂವಿಧಾನದ 46ನೇ ವಿಧಿ ಸರ್ಕಾರಗಳು ಹಿಂದುಳಿದ ಜನರ ಅದರಲ್ಲಯೂ ಪರಿಶಿಷ್ಟ ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ ನೀಡಿ ಅಭಿವೃದ್ದಿಪಡಿಸುವುದು ಸರ್ಕಾರಗಳ ಜವಾಬ್ದಾರಿಯೆಂದು ಹೇಳುತ್ತದೆ.**

DEVARAJU CE

8. ಯಾವ ವಿಧಿಯು 6 ರಿಂದ 14 ವರ್ಷ ವಯೋಮಿತಿಯೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ?

**21ಎ ವಿಧಿಯಲ್ಲ 6 ರಿಂದ 14 ವರ್ಷ ವಯೋಮಿತಿಯೊಸಗಿನ ಎಲ್ಲಾ- ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದನ್ನು ಮೂಲಭೂತ ಹಕ್ಕು ಎಂದು ತಿಳಿಸುತ್ತದೆ.**

10. ಬ್ರಿಟಿಷ್ ಸರ್ಕಾರವು ಯಾವ ಕಾಯಿದೆ ಮೂಲಕ ಭಾರತದ ಅಸ್ಪೃಶ್ಯ ವರ್ಗ ಹಾಗೂ ಗುಡ್ಡಗಾಡು ವರ್ಗದ ಜನರನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಎಂಬುದಾಗಿ ಹೆಸರಿಸಿತು? **ಬ್ರಿಟಿಷ್ ಸರ್ಕಾರವು 1935ರಲ್ಲ ಕೇಂದ್ರ ಕಾಯಿದೆ ಮೂಲಕ ಭಾರತದ ಅಸ್ಪೃಶ್ಯ ವರ್ಗ ಹಾಗೂ ಗುಡ್ಡಗಾಡು ವರ್ಗದ ಜನರನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಎಂಬುದಾಗಿ ಹೆಸರಿಸಿತು.**

11. ಹೊರಗಿನಿಂದ ಬಂದವರು, ಊರಿನಿಂದ ಹೊರಗಡೆ ನೆಲಸಿದರೂ ಅಥವಾ ಊರೊಳಗಡೆ ಇದ್ದವರನ್ನು ಕಾರಣಾಂತರಗಳಿಂದ ಊರ ಹೊರಕ್ಕೆ ತಳ್ಳಲಾಯಿತೊ ಎಂಬುದನ್ನು ವಿಶ್ಲೇಷಣೆ ಮಾಡಿದರೆ ಅಸ್ಪೃಶ್ಯತೆಯ ಉಗಮ ಮತ್ತು ಅಸ್ಪೃಶ್ಯರು ಯಾರೆಂಬುದು ಅರ್ಥವಾಗುತ್ತದೆ'. ಈ ಮಾತನ್ನು ಹೇಳಿದವರು ಯಾರು? **ಡಾ. ಬಿ.ಆರ್. ಅಂಬೇಡ್ಕರ್**

12. 'ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದೂ ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ'. ಈ ಮಾತನ್ನು ಹೇಳಿದವರು ಯಾರು? **ಮಹಾತ್ಮಾ ಗಾಂಧೀಜಿ**

13. 'ಮಲ ಹೊರುವ, ಸತ್ತ ಪ್ರಾಣಿಗಳನ್ನು ಸಾಗಿಸುವ, ಬೀದಿ–ಚರಂಡಿ ಗುಡಿಸುವ ಹೀನ ವೃತ್ತಿಗಳನ್ನು ಮಾಡಬೇಕಾಗಿತ್ತು.' ಈ ಮಾತನ್ನು ಹೇಳಿದವರು ಯಾರು? **ಬಿ.ಕುಪ್ಪುಸ್ವಾಮಿ**

14. 'ಶಿಕ್ಷಣ ಸಾರ್ವಜನಿಕ ಸ್ವತ್ತಾಗಬೇಕು' ಎಂದು ಪ್ರತಿಪಾದಿಸಿದವರು ಯಾರು? **ಬಿ.ಆರ್. ಅಂಬೇಡ್ಕರ್**

15. ಬಿ.ಆರ್. ಅಂಬೇಡ್ಕರ್ ಅವರು 'ಸಂವಿಧಾನ ಶಿಲ್ಪಿ' ಎಂಬ ಕೀರ್ತಿಗೆ ಏಕೆ ಭಾಜನರಾಗಿದ್ದಾರೆ?

**ಕ್ರಾಂತಿಕಾರಿ ಚಿಂತನೆಗಳಿಂದಲೇ ಡಾ॥ ಬಿ. ಆರ್. ಅಂಬೇಡ್ಕರ್ ಅವರು ಸಂವಿಧಾನ ಕರಡು ರಚನೆಯಲ್ಲಿ ನಿರ್ಣಾಯಕವಾದ ಹಾಗೂ ಮಹತ್ವದ ಪಾತ್ರವನ್ನು ನಿರ್ವಹಿಸಿ ಸಂವಿಧಾನ ಶಿಲ್ಪಿ' ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.**

16. ಸಂವಿಧಾನದ 17ನೆಯ ವಿಧಿಯ ಮಹತ್ವವೇನು?

**ಸಂವಿಧಾನದ 17ನೆಯ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸಿದೆ.**

17. ಭಾರತ ಸರ್ಕಾರ 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು ಯಾವಾಗ ಜಾರಿಗೊಸಿದೆ?

**ಭಾರತ ಸರ್ಕಾರ 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು 1955ರಲ್ಲ ಜಾರಿಗೊಸಿದೆ.**

18. 'ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ'ಯನ್ನು ಏನೆಂದು ತಿದ್ದುಪಡಿ ಮಾಡಲಾಗಿದೆ? **'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ'**

19. ಸಾಮಾಜಿಕ ಅಸಮಾನತೆ ಎಂದರೇನು?

**ವ್ಯಕ್ತಿಗಳು ಸಮಾಜದಲ್ಲಿ ವಿವಿಧ ಲಕ್ಷಣಗಳ ಆಧಾರದಲ್ಲಿ ಲಿಂಗ, ಜಾತಿ, ವೃತ್ತಿ, ವರ್ಗ ಮತ್ತು ಜನಾಂಗ, ಇತ್ಯಾದಿ ಶ್ರೇಣೀಕರಣಗೊಂಡಿರುತ್ತಾರೆ ಎನ್ನುವುದನ್ನು ಸಾಮಾಜಿಕ ಅಸಮಾನತೆ ಎನ್ನುವರು.**

20.ಸಾಮಾಜಿಕ ಸ್ತರವಿನ್ಯಾಸ ಎಂದರೇನು ?

**ಸಮಾಜದಲ್ಲಿ ಇರುವ ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆಗೆ ಸಮಾಜಿಕ ಸ್ತರ ವಿನ್ಯಾಸ ಎನ್ನುವರು.**

21.ಶಿಕ್ಷಣಕ್ಕಿರುವ ಸಾಮಜಿಕ ನ್ಯಾಯದ ಉದ್ಧೇಶಗಳನ್ನು ನಮ್ಮ ಸಂವಿಧಾನದ ಯಾವ ತತ್ವಗಳಲ್ಲಿ ಕಾಣಬಹುದು. ?

**.ಪ್ರಸ್ತಾವನೆ & ರಾಜ್ಯ ನಿರ್ದೇಶಕ ತತ್ವ**

22.----ವಿಧಿ ನಿರ್ದಿಷ್ಟವಾಗಿ 14ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ &ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳಿದೆ. **45ನೇವಿಧಿ**

23.----ತಿದ್ದುಪಡಿ ನಿರ್ದಿಷ್ಟವಾಗಿ 14ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಉಚಿತ &ಕಡ್ಡಾಯ ಶಿಕ್ಷಣ ನೀಡಬೇಕೆಂದು ಹೇಳಿದೆ. **86ನೇ ವಿಧಿ**

24.ಶಿಕ್ಷಣ ಮೂಲಭೂತ ಹಕ್ಕು ಎಂದು ಸಾರಿದ ಸಂವಿಧಾನದ ವಿಧಿ—**21ನೇವಿಧಿ**

25.ಅಸ್ಪೃಶ್ಯತಾ ಆಚರಣೆಯನ್ನು ಸಂವಿಧಾನದ --- ವಿಧಿಯು ನಿಷೇಧಿಸಿದೆ. **17ನೇ ವಿಧಿ**

26.ಅಸ್ಪೃಶ್ಯತಾ ಅಪರಾಧ ಕಾಯ್ದೆ ----ಜಾರಿಗೆ ಬಂದಿತು. **1955**

27.ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದವರು **ಮಹಾತ್ಮ ಗಾಂಧೀಜಿ**



DEVARAJU.C.E

# ಅಧ್ಯಾಯ–03 ಸಾಮಾಜಿಕ ಚಳವಳಿಗಳು

I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತರ್ತಗಳಿಂದ ಭರ್ತಿ ಮಾಡಿರಿ.

1. ಪರಿಸರ ಚಳವಳಿ ಎಂದರೆ__________ . **(ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿ)**
2. 'ನರ್ಮದಾ ಆಂದೋಲನದ' ನೇತೃತ್ವ ವಹಿಸಿದ್ದವರು. _______________ . **(ಮೇಧಾ ಪಾಟ್ಕರ್ )**
3. ಡಾ. ಶಿವರಾಮ ಕಾರಂತರು _______ ದಲ್ಲಿ ಅಣುವಿದ್ಯುತ್ ಸ್ಥಾವರ ಸ್ಥಾಪಿಸುವುದನ್ನು ವಿರೋಧಿಸಿದರು. ( **ಕೈಗಾ**)
4. ಮಹಿಳಾ ಚಳವಳಿ ಎಂದರೆ___________ . **(ಮಹಿಳೆಯ ಮೇಲೆ ಪುರುಷ ಪ್ರಾಧಾನ್ಯ ಸಂಸ್ಕೃತಿ ನಡೆಸಿದ ದರ್ಪ, ಶೋಷಣೆ, ದೌರ್ಜನ್ಯಗಳ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆ)**

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಸಾಮಾಜಿಕ ಚಳವಳಿ ಎಂದರೇನು?

 **ಸಾಮಾಜಿಕ ಚಳವಳಿ ಎಂದರೆ ಮಾನವ ಸಮಾಜದ ಚಲನೆ, ಬದಲಾವಣೆ ಮತ್ತು ರೂಪಾಂತರಗಳಿಗೆ ಸಂಬಂಧಿಸಿ ನಡೆಯುವ ಒಂದು ವ್ಯವಸ್ಥಿತ ಸ್ವಾಭಾವಿಕ ಪ್ರತಿರೋಧದ ಸಾಮಾಜಿಕ ಪ್ರತಿಕ್ರಿಯೆ**

2. ಸಮೂಹ ವರ್ತನೆ ಎಂದರೇನು?

 **ಜನರು ಆಕಸ್ಮಿಕವಾದ ಕಾರಣದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ತಾತ್ಕಾಲಿಕವಾಗಿ ನಡೆಸುವ ಆಲೋಚನೆ, ಭಾವನೆ ಹಾಗೂ ವರ್ತನೆಗಳನ್ನು ಸಮೂಹ ವರ್ತನೆ ಎನ್ನಬಹುದು.**

3. ಜನಮಂದೆ ಎಂದರೇನು?

 **ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆ**

4. ದೊಂಬಿ/ಗಲಭೆ ಎಂದರೇನು?

 **ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ/ಗಲಭೆ ಎಂದು ಕರೆಯಬಹುದು.**

5. ಪರಿಸರ ಚಳವಳಿ ಎಂದರೇನು?

 **ಪರಿಸರ ಚಳವಳಿ ಎಂದರೆ ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿ.**

6. ಚಿಪ್ಕೋ ಚಳವಳಿ ಎಲ್ಲಿ ನಡೆಯಿತು?

 **ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯ ರೆನ್ನಿ ಗ್ರಾಮದಲ್ಲಿ ಚಿಪ್ಕೋ ಚಳವಳಿ ನಡೆಯಿತು**

7. ಕರ್ನಾಟಕದ ಅಪ್ಪಿಕೋ ಚಳವಳಿ ಎಲ್ಲಿ ನಡೆಯಿತು?  **ಉತ್ತರ ಕನ್ನಡ ಜಿಲ್ಲೆಯ ಸಲ್ಕಾನಿ ಗ್ರಾಮ**

8. ನರ್ಮದಾ ಬಚಾವೋ ಆಂದೋಲನದ ನಾಯಕತ್ವ ವಹಿಸಿದವರು ಯಾರು?  **ಮೇಧಾ ಪಾಟ್ಕರ್**

9. ಕೈಗಾ ವಿರೋಧಿ ಚಳವಳಿಯ ಉದ್ದೇಶವೇನು?

 **ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ಮುಂತಾದ ದುಶ್ಪರಿಣಾಮಗಸಿಂದ ಜೀವ ಪ್ರಭೇದಗಸ ಮೇಲೆ ಹಾನಿಯಾಗುತದ್ತೆ ಎಂದು ಕೈಗಾ ವಿರೋಧಿ ಚಳವಳಿಯನ್ನು ಆರಂಭಿಸಲಾಯಿತು.**

10. ಕರ್ನಾಟಕ ರಾಜ್ಯ ರೈತ ಸಂಘ ಸ್ಥಾಪನೆ ಮಾಡಿದವರು ಯಾರು?  **ಪ್ರೊ. ಎಂ.ಡಿ. ನಂಜುಂಡಸ್ವಾಮಿ**

11. ಲಂಡನ್‌ನಲ್ಲಿ ಪ್ರಾರಂಭವಾದ ಮೊದಲ ಕಾರ್ಮಿಕರ ಸಂಘಟನೆ ಯಾವುದು?

 'The International Working men's Association'

12.ಜ್ಯೋತಿರಾವ್ ಫುಲೆಯವರ ಅಸ್ಪೃಶ್ಯತಾ ಚಳುವಳಿಯ ಉದ್ದೇಶ–

**ಚತುರ್ವರ್ಣ ಆಧಾರಿತ ಮಾನವ ವಿರೋಧಿ ಆಚರಣೆಗಳನ್ನು & ಅವುಗಳ ಪ್ರಾಬಲ್ಯವನ್ನು ತಡೆಯುವುದು**

## ಭೂಗೋಳ ಶಾಸ್ತ್ರ

## ಅಧ್ಯಾಯ-4 ಭಾರತದ ಮಣ್ಣುಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತರ್ತಗಳಿಂದ ಭರ್ತಿಮಾಡಿರಿ.**

1. ನದಿಗಳ ಸಂಚಯದಿಂದ ನಿರ್ಮಾಣಗೊಂಡ ಮಣ್ಣಿಗೆ ________ ಎನ್ನುವರು.**(ಮೆಕ್ಕಲು ಮಣ್ಣು)**
2. ಕಪ್ಪು ಮಣ್ಣನ್ನು ________ ಮತ್ತು ________ ಎಂತಲೂ ಕರೆಯಲಾಗಿದೆ. **(ರೀಗರ್ ಮಣ್ಣು ಮತ್ತು ಕಪ್ಪು ಹತಿ್ತ ಮಣ್ಣು)**
3. ಅತ್ಯಧಿಕ ಉಷ್ಣಾಂಶ ಮತ್ತು ಮಳೆಯ ಪರಿಸ್ಥಿತಿಯುಳ್ಳ ಉಷ್ಣವಲಯದಲ್ಲ ಉತ್ಪತ್ತಿಯಾಗುವ ಮಣ್ಣು ________ ಆಗಿರುತ್ತದೆ. **(ಲ್ಯಾಟರೈಟ್ ಮಣ್ಣು ಜಂಬಿಟ್ಟಿಗೆ)**
4. ಪರ್ವತ ಮಣ್ಣು ________ ಬೆಳೆಗಳ ಬೇಸಾಯಕ್ಕೆ ಸೂಕ್ತವಾದುದು. **(ಚಹ, ಕಾಫಿ ಮತ್ತು ಹಣ್ಣು)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಮೆಕ್ಕಲು ಮಣ್ಣು ಹೇಗೆ ಉತ್ಪತ್ತಿಯಾಗುತದ್ತೆ?

 **ನದಿಗಳು ಮೆಕ್ಕಲು ಕಣಗಳನ್ನು ಸಂಚಯಿಸುವುದರಿಂದ ಇಂತಹ ಮಣ್ಣು ಉತ್ಪತ್ತಿಯಾಗುತದ್ತೆ.**

2. ಯಾವ ಮಣ್ಣನ್ನು 'ರೀಗರ್' ಮಣ್ಣು ಎಂದು ಕರೆಯುವರು?  **ಕಪ್ಪುಮಣ್ಣು**
3. ಕಪ್ಪು ಮಣ್ಣುನ್ನು 'ಕಪ್ಪು ಹತಿ್ತ ಮಣ್ಣು' ಎಂದು ಏಕೆ ಕರೆಯುವರು?

 **ಹತಿ್ತ ಬೇಸಾಯಕ್ಕೆ ಸೂಕವ್ತಾಗಿರುವುದರಿಂದ 'ಕಪ್ಪು ಹತಿ್ತ ಮಣ್ಣು' ಎಂತಲೂ ಕರೆಯಲಾಗಿದೆ.**

4. ಕಪ್ಪುಮಣ್ಣು ಹೇಗೆ ಉತ್ಪತ್ತಿಯಾಗಿದೆ?

 **ಇದು ಬಸಾಲ್ಟ್ ಶಿಲಾಕಣಗಳಿಂದ ಉತ್ಪತಿ್ತಯಾಗಿದೆ.**

5. ಕೆಂಪು ಮಣ್ಣು ಹೇಗೆ ಉತ್ಪತಿ್ತಯಾಗಿದೆ?

 **ಇದು ಗ್ರಾನೈಟ್, ನೀಸ್ ಮತ್ತು ಇತರೆ ಸ್ಫಟಿಕ ಶಿಲೆಗಳ ಶಿಥಿಲೀಕರಣದ ವಸ್ತುಗಳಿಂದ ಉತ್ಪತಿ್ತಯಾಗಿದೆ.**

6. ಕೆಂಪು ಮಣ್ಣಿನಲ್ಲಿ ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ.ಏಕೆ?  **ಇದರಲ್ಲಿ ಮರಳಿನಾಂಶ ಹೆಚ್ಚು ಮತ್ತು ಜೇಡಿಯ ಪ್ರಮಾಣ ಕಡಿಮೆ. ಹೀಗಾಗಿ ಇದಕ್ಕೆ ತೇವಾಂಶ ಸಂಗ್ರಹದ ಸಾಮರ್ಥ್ಯ ಕಡಿಮೆ.**
7. ಯಾವ ಮಣ್ಣನ್ನು ಲ್ಯಾಟರೈಟ್ ಮಣ್ಣು ಎಂದು ಕರೆಯುವರು?  **ಜಂಬಿಟ್ಟಿಗೆ ಮಣ್ಣು**
8. ಭಾರತದಲ್ಲಿ ವಾಯವ್ಯ ಭಾಗದಲ್ಲಿ ಹೆಚ್ಚಾಗಿ ಕಂಡುಬರುವ ಮಣ್ಣು ಯಾವುದು?  **ಮರುಭೂಮಿ ಮಣ್ಣು**
9. ಪರ್ವತ ಮಣ್ಣು ಹೇಗೆ ಉತ್ಪತ್ತಿಯಾಗಿದೆ?

 **ಜೈವಿಕ ವಸ್ತುಗಳು ಕೊಳೆಯುವುದರಿಂದ ಪರ್ವತ ಮಣ್ಣು ಉತ್ಪತ್ತಿಯಾಗಿದೆ.**

10. ಮಣ್ಣಿನ ಸವೆತ ಎಂದರೇನು?

 **ಮಣ್ಣಿನ ಸ್ತರದ ಮೇಲ್ಭಾಗವು ನೈಸರ್ಗಿಕ ಕರ್ತೃಗಳಿಂದ ಕೊಚ್ಚಿಹೋಗುವುದನ್ನು ಮಣ್ಣಿನ ಸವೆತವೆನ್ನುವರು.**

11. ಮಣ್ಣಿನ ಸಂರಕ್ಷಣೆ ಎಂದರೇನು?

 **ಮಣ್ಣಿನ ಸವೆತದ ನಿಯಂತ್ರಣ ಮತ್ತು ಫಲವತತ್ತೆಯನ್ನು ಕಾಪಾಡುವುದನ್ನು 'ಮಣ್ಣಿನ ಸಂರಕ್ಷಣೆ' ಎನ್ನುವರು.**

## ಅಧ್ಯಾಯ-7 ಭಾರತದ ಭೂ ಸಂಪನ್ಮೂಲಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತರ್ತಗಳಿಂದ ಭರ್ತಿಮಾಡಿ.**

1. ಸಾಗುವಳಿಗೆ ಬಳಕೆಯಾಗದ ಭೂಮಿಯನ್ನು ________ ಎಂದು ಕರೆಯಲಾಗಿದೆ. **(ಪಾಳು ಭೂಮಿ)**
2. ಬೆಳೆ ಮತ್ತು ಪಶುಪಾಲನೆಗಳೆರಡನ್ನೂ ಒಳಗೊಂಡ ಕೃಷಿ ಪದ್ಧತಿಗೆ ___ ಎಂದು ಕರೆಯಲಾಗಿದೆ. **(ಮಿಶ್ರಣ ಬೇಸಾಯ)**
3. ಮುಂಗಾರು ಮತ್ತು ಹಿಂಗಾರು ಬೆಳೆ ಬೆಳೆಯುವ ಅವಧಿಗಳ ನಡುವಣ ಅವಧಿಯಲ್ಲಿ ಬೆಳೆಯುವ ಬೆಳೆಗಳಿಗೆ ________ ಎನ್ನುವರು. **(ಜ್ಯಾಡ್ ಬೆಳೆ)**
4. ಭಾರತದಲ್ಲಿ ________ ರಾಜ್ಯವು ಅತಿ ಹೆಚ್ಚು ಭತ್ತಉತ್ಪಾದಿಸುತ್ತದೆ. **(ಪಶ್ಚಿಮ ಬಂಗಾಳ)**

**II. ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಭೂ ಬಳಕೆ ಎಂದರೇನು?

 **ಅರಣ್ಯ, ವ್ಯವಸಾಯ, ಹುಲ್ಲುಗಾವಲು ಇತ್ಯಾದಿಗಳಂತಹ ವಿವಿಧ ಉದ್ದೇಶಗಳಿಗಾಗಿ ಭೂಮಿಯನ್ನು ಬಳಕೆ ಮಾಡುವುದನ್ನು 'ಭೂಬಳಕೆ' ಎನ್ನುವರು.**

DEVARAJU CE

2. ,ವ್ಯವಸಾಯ ಅಥವಾ ಕೃಷಿ' ಎಂದರೇನು?  **ಮನುಷ್ಯ ತನಗೆ ಅಗತ್ಯವಾದ ಆಹಾರ ಧಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸುವ ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದನ್ನು ,ವ್ಯವಸಾಯ ಅಥವಾ ಕೃಷಿ ಎನ್ನುವರು**

3. ಜೀವನಾಧಾರಿತ ಬೇಸಾಯ ಎಂದರೇನು?
 **ರೈತ ಮತ್ತು ಆತನ ಕುಟುಂಬದ ಬಸಕೆಗಾಗಿ ಬೆಳೆ ಬೆಳೆಯುವ ಕೃಷಿ ಪದ್ಧತಿಗೆ 'ಜೀವನಾಧಾರಿತ ಬೇಸಾಯ' ಎನ್ನುವರು**

4. ಜೀವನಾಧಾರಿತ ಬೇಸಾಯದ ವಿಧಗಳು ಯಾವುವು?  **ವರ್ಗಾವಣೆ ಬೇಸಾಯ ಮತ್ತು ಸ್ಥಿರ ಬೇಸಾಯ.**

5. 'ವರ್ಗಾವಣೆ ಬೇಸಾಯ' ಎಂದರೇನು?
 **ಕಾಡಿನ ಸ್ವಲ್ಪ ಭಾಗವನ್ನು ಕತ್ತರಿಸಿ ಕೆಲವು ವರ್ಷಗಳ ಕಾಲ ಬೇಸಾಯ ಮಾಡಲಾಗುವುದು. ಅಲ್ಲಿನ ಮಣ್ಣಿನ ಸಾರವು ಕಡಿಮೆಯಾದ ಮೇಲೆ ಅದನ್ನು ಬಿಟ್ಟು ಮತ್ತೊಂದೆಡೆಗೆ ವಲಸೆ ಹೋಗಿ ಅದೇ ರೀತಿಯ ಬೇಸಾಯ ಕ್ರಮ ಮುಂದುವರಿಸುವುದನ್ನು 'ವರ್ಗಾವಣೆ ಬೇಸಾಯ' ಎನ್ನುವರು.**

6. ಸ್ಥಿರ ಅಥವಾ ಸ್ಥಾಯಿ ಬೇಸಾಯ' ಎಂದರೇನು?
 **ಒಂದೆಡೆಯಿಂದ ಮತ್ತೊಂಡೆಗೆ ಸ್ಥಳ ಬದಲಾವಣೆ ಮಾಡದೆ ಶಾಶ್ವತವಾಗಿ ಒಂದೇ ಕಡೆ ನೆಲೆಸಿ ಸಾಗುವಳಿ ಮಾಡುವುದನ್ನು 'ಸ್ಥಿರ ಅಥವಾ ಸ್ಥಾಯಿ ಬೇಸಾಯ' ಎನ್ನುವರು**

7. ಸಾಂದ್ರ ಬೇಸಾಯ ಎಂದರೇನು?
 **ಚಿಕ್ಕ ಭೂಹಿಡುವಳಿಯಲ್ಲಿ ಅಧಿಕ ಬಂಡವಾಳ ಮತ್ತು ಕಾರ್ಮಿಕರನ್ನು ತೊಡಗಿಸುವ ಬೇಸಾಯ ಪದ್ಧತಿಗೆ 'ಸಾಂದ್ರ ಬೇಸಾಯ ' ಎನ್ನುವರು.**

8. ವಾಣಿಜ್ಯ ಬೇಸಾಯ ಎಂದರೇನು?
 **ವ್ಯಾಪಾರದ ಉದ್ದೇಶಕ್ಕಾಗಿ ಬೆಳೆಗಳನ್ನು ಬೆಳೆಯುವ ಕೃಷಿವಿಧಾನಕ್ಕೆ 'ವಾಣಿಜ್ಯ ಬೇಸಾಯ' ಎನ್ನುವರು.**

9. ಮಿಶ್ರಣ ಬೇಸಾಯ ಎಂದರೇನು?
 **ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆಜೊತೆಯಾಗಿ ಸಾಗುವ ಕೃಷಿ ವಿಧಾನ.**

10. ನೆಡುತೋಪು ಬೇಸಾಯ ಎಂದರೇನು?
 **ಮಾರಾಟಕ್ಕಾಗಿ ವಿಶಾಲವಾದ ತೋಟಗಳಲ್ಲಿ ಯಾವುದಾದರೂ ಒಂದು ಬೆಳೆಯ ಸಾಗುವಳಿಗೆ 'ನೆಡುತೋಪು ಬೇಸಾಯ' ಎನ್ನುವರು.**

11. ಒಣ ಬೇಸಾಯ ಎಂದರೇನು?
 **ಅತಿ ಕಡಿಮೆ ಮಳೆ ಬೀಳುವ ಹಾಗೂ ನೀರಾವರಿ ಸೌಲಭ್ಯವಿಲ್ಲದ, ಇದ್ದರೂ ಅದು ಮಿತವಾಗಿರುವ ಪ್ರದೇಶಗಳಲ್ಲಿ ರೂಢಿಯಲ್ಲರುವ ಬೇಸಾಯ ಪದ್ಧತಿಯನ್ನು 'ಒಣ ಬೇಸಾಯ'ವೆನ್ನುವರು.**

12. ಆರ್ದ್ರ ಬೇಸಾಯ ಎಂದರೇನು?
 **ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿಯ ನೆರವಿಲ್ಲದೆ ಬೆಳೆಗಳನ್ನು ಬೆಳೆಯುವುದನ್ನು 'ಆರ್ದ್ರ ಬೇಸಾಯ' ಎನ್ನುವರು**

13. ನೀರಾವರಿ ಬೇಸಾಯ ಎಂದರೇನು?
 **ನೀರಾವರಿ ಸಹಾಯದಿಂದ ಬೆಳೆ ಬೆಳೆಯುವ ಕೃಷಿ ವಿಧಾನವನ್ನು 'ನೀರಾವರಿ ಬೇಸಾಯ' ಎನ್ನುವರು.**

14. ಮುಂಗಾರು ಬೆಳೆ ಋತು ಎಂದರೇನು?
 **ಮಳೆಗಾಲದಲ್ಲಿ ಬೆಳೆ ಬೆಳೆಯುವುದನ್ನು ಮುಂಗಾರು ಬೆಳೆ ಋತು ಎನ್ನುವರು.**

15. ಹಿಂಗಾರು ಬೆಳೆ ಋತು ಎಂದರೇನು?
 **ಫೆಬ್ರುವರಿ–ಮಾರ್ಚ್ ತಿಂಗಳಲ್ಲ ಬೆಳೆ ಕಟಾವು ಮಾಡುವುದನ್ನು ಹಿಂಗಾರು ಬೆಳೆ ಋತು' ಎನ್ನುವರು.**

16. ಜ್ಯಾಡ್ ಬೆಳೆ ಋತು ಎಂದರೇನು?
 **ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ಅವಧಿಯಲ್ಲಿ ಬೆಳೆಯುವ ಬೆಳೆಗಳು**

17. ಬೆಳೆಯಿಡುವ ಮಾದರಿ ಎಂದರೇನು?
 **ಒಂದು ನಿರ್ದಿಷ್ಟ ಅವಧಿಯಲ್ಲ ವಿವಿಧ ಬೆಳೆಗಳಿಂದ ಆವರಿಸಿರುವ ಪ್ರದೇಶದ ಅನುಪಾತವನ್ನು 'ಬೆಸೆಯಿಡುವ ಮಾದರಿ' ಎನ್ನುವರು**

18. ದೇಶದಲ್ಲೇ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯ ಯಾವುದು?
 **ಪಶ್ಚಿಮ ಬಂಗಾಳವು ದೇಶದಲ್ಲೇ ಅತಿ ಹೆಚ್ಚು ಭತ್ತಉತ್ಪಾದಿಸುವ ರಾಜ್ಯ.**

19. ಭಾರತದಲ್ಲೇ ಅತಿ ಹೆಚ್ಚು ಗೋಧಿ ಉತ್ಪಾದಿಸುವ ರಾಜ್ಯ ಯಾವುದು?
 **ಉತ್ತರ ಪ್ರದೇಶವು ಭಾರತದಲ್ಲೇ ಅತಿ ಹೆಚ್ಚು ಗೋಧಿ ಉತ್ಪಾದಿಸುವ ರಾಜ್ಯ.**

20. ವಾಣಿಜ್ಯ ಬೆಳೆಗಳು ಎಂದರೇನು?  **ವ್ಯಾಪಾರದ ಉದ್ದೇಶದಿಂದ ಬೆಳೆಯುವ ಬೆಳೆಗಳಿಗೆ ವಾಣಿಜ್ಯ ಬೆಳೆಗಳೆನ್ನುವರು**

21. ನಾರು ಬೆಳೆಗಳು ಎಂದರೇನು?
 **ಜವಳಿ ಉದ್ಯಮಗಳಿಗೆ ಅಗತ್ಯವಾದ ಕಚ್ಚಾಪದಾರ್ಥ ಪೂರೈಸುವ ಬೆಳೆಗಳಿಗೆ 'ನಾರು ಬೆಳೆಗಳು ಎನ್ನುವರು**

22. ಭಾರತದಲ್ಲಿ ಅತಿ ಪ್ರಮುಖ ಪಾನೀಯ ಬೆಳೆಗಳು ಯಾವುವು?
 **ಭಾರತದಲ್ಲಿ ಕಾಫಿ ಮತ್ತು ಚಹಗಳು ಅತಿ ಪ್ರಮುಖ ಪಾನೀಯ ಬೆಳೆಗಳು.**

23. ತೋಟಗಾರಿಕೆ ಬೇಸಾಯ ಎಂದರೇನು?  **ಹಣ್ಣು, ತರಕಾರಿ,ಹೂವು, ಔಶಧೀಯ ಮತ್ತು ಅಲಂಕಾರಿಕ ಬೆಳೆಗಳನ್ನು ತೋಟಗಳಲ್ಲ ಕ್ರಮಬದ್ದವಾಗಿ ಬೆಳೆಯುವುದನ್ನು ,ತೋಟಗಾರಿಕೆ ಬೇಸಾಯ' ಎನ್ನುವರು.**

24. ಪುಷ್ಪ ಕೃಷಿ ಎಂದರೇನು?  **ಮಾರಾಟಕ್ಕಾಗಿ ಹೂವುಗಳನು ಸಾಗುವಳಿ ಮಾಡುವ ಕಲೆಗೆ ಪುಷ್ಪ ಕೃಷಿ ಎನ್ನುವರು.**

25.ಕೈಗಾರಿಕೆ ಎಂದರೇನು ?

**ಕಚ್ಚಾ ವಸ್ತುವನ್ನು ಉಪಯುಕ್ತ ವಸ್ತುವನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಕೈಗಾರಿಕೆ ಎನ್ನುವರು**

26. ಸಾಂದ್ರ ಬೇಸಾಯ . **ಒಂದೇ ವ್ಯವಸಾಯದ ಭೂಮಿಯಲ್ಲಿ ಏಕಕಾಲದಲ್ಲಿ ಎರಡು-ಮೂರು ಬೆಳೆಗಳನ್ನು ವೈಜ್ಞಾನಿಕವಾಗಿ ಬೆಳೆದು ಹೆಚ್ಚು ಇಳುವರಿ ಪಡೆಯುವುದು.**

27.ಮುಂಗಾರು ಬೆಳೆ ಋತು ಎಂದರೇನು.

**ನೈರುತ್ಯ ಮಾನ್ಸೂನ್ ಮಾರುತ ಆರಂಭದೊಡನೆ ಬೆಳೆ ಬೆಳೆಯುದನ್ನು ಮುಂಗಾರು ಬೆಳೆ ಎಂದು ಕರೆಯುತ್ತಾರೆ.**

28. ಭೂಬಳಕೆ ಎಂದರೇನು ? **ಭೂಮಿಯನ್ನು ವಿವಿಧ ಉದ್ದೇಶಗಳಿಗೆ ಬಳಸುವದನ್ನು ಭೂ ಬಳಕೆ ಎನ್ನುವರು**

29.ಹಿಂಗಾರು ಬೆಳೆ ಋತು ಎಂದರೇನು ?

**ಈಶಾನ್ಯ ಮಾನ್ಸೂನ್ ಮಾರುತ ಆರಂಭದೊಡನೆ ಬೆಳೆ ಬೆಳೆಯುದನ್ನು ಹಿಂಗಾರು ಬೆಳೆ ಎಂದು ಕರೆಯುತ್ತಾರೆ.**

30.ಜೇಡ್ ಬೇಸಾಯ ಎಂದರೇನು ?

**ಮುಂಗಾರು & ಹಿಂಗಾರು ಬೆಳೆ ಋತುಗಳ ನಡುವಣ ಅವಧಿಯಲ್ಲಿ ಬೆಳೆ ಬೆಳೆಯುದನ್ನು ಜೇಡ್ ಬೇಸಾಯ ಎನ್ನುವರು**

31.ತೋಟಗಾರಿಕೆ ಬೇಸಾಯ ಎಂದರೇನು ?

**ಹಣ್ಣು, ತರಕಾರಿ,ಹೂವು ,ಔಷದೀಯ& ಅಲಂಕಾರಿಕ ಬೆಳೆಗಳನ್ನು ತೋಟದಲ್ಲಿ ಕ್ರಮಬದ್ಧವಾಗಿ ಬೆಳೆಯುದಕ್ಕೆ ತೋಟಗಾರಿಕೆ ಬೇಸಾಯ ಎನ್ನುವರು**

32.ಪುಷ್ಪ ಬೇಸಾಯ ಎಂದರೆನು ? **ಮಾರಾಟಕ್ಕಾಗಿ ಹೂವುಗಳನ್ನು ಸಾಗುವಳಿ ಮಾಡುವ ಕಲೆಗೆ ಪುಷ್ಪ ಬೇಸಾಯ ಎನ್ನುವರು.**

## ಅಧ್ಯಾಯ-8 ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.**

1 ಭಾರತದ ಅತ್ಯಂತ ಪ್ರಮುಖವಾದ ಮಿಶ್ರಲೋಹ ________ .**(ಮ್ಯಾಂಗನೀಸ್)**

2. ಅಲ್ಯೂಮಿನಿಯಂನ ಪ್ರಮುಖ ಕಚ್ಚಾ ಪದಾರ್ಥ ________ .**(ಬಾಕ್ಸೈಟ್)**

3. ಭಾರತದ ಅತ್ಯಂತ ಪ್ರಮುಖವಾದ ಅಲೋಹ ಖನಿಜ ________ ಆಗಿರುತ್ತದೆ. **(ಅಬ್ರಕ)**

4. ಸಸ್ಯಾವಶೇಷ ಇಂಧನ ________ ಆಗಿರುತ್ತದೆ.**(ಕಲ್ಲಿದ್ದಲು)**

5. ಶಿವನಸಮುದ್ರ ಜಲವಿದ್ಯುತ್ ಕೇಂದ್ರವು ________ ರಾಜ್ಯದಲ್ಲಿದೆ.**(ಕರ್ನಾಟಕ)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಗಣಿಗಾರಿಕೆ ಎಂದರೇನು?  **ಭೂಮಿಯಿಂದ ಖನಿಜಗಳನ್ನು ಹೊರತೆಗೆಯುವ ಕಾರ್ಯವನ್ನು 'ಗಣಿಗಾರಿಕೆ' ಎನ್ನುವರು**
2. ಭಾರತದಲ್ಲಿ ಅತ್ಯಧಿಕ ಕಬ್ಬಿಣದ ಅದಿರು ಉತ್ಪಾದಿಸುವ ರಾಜ್ಯ ಯಾವುದು?  **ಒಡಿಶಾ**
3. ಪ್ರಮುಖವಾದ ಮಿಶ್ರಲೋಹ ಖನಿಜ ಯಾವುದು?  **ಮ್ಯಾಂಗನೀಸ್ ಅದಿರು**
4. ಅಲ್ಯೂಮಿನಿಯಂ ಲೋಹ ತಯಾರಿಕೆಗೆ ಅಗತ್ಯವಾದ ಮುಖ್ಯ ಕಚ್ಚಾವಸ್ತು ಯಾವುದು?  **ಬಾಕ್ಸೈಟ್**
5. ಪ್ರಮುಖ ಅಲೋಹ ಖನಿಜ ಯಾವುದು?  **ಅಭ್ರಕ**
6. ಭಾರತದಲ್ಲೇ ಅತಿ ಹೆಚ್ಚು ಅಬ್ರಕ ಉತ್ಪಾದಿಸುವ ರಾಜ್ಯ ಯಾವುದು?  **ಆಂಧ್ರ ಪ್ರದೇಶ**
7. 'ಶಕ್ತಿ ಸಂಪನ್ಮೂಲಗಳು ಎಂದರೇನು?  **ವಿದ್ಯುಚ್ಛಕ್ತಿ ಉತ್ಪಾದನೆಗೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು 'ಶಕ್ತಿ ಸಂಪನ್ಮೂಲಗಳು ಎನ್ನುವರು**
8. ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ  **ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕಾನಿಲ**
9. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಸರಿಸಿ  **ಸೌರಶಕ್ತಿ, ಪವನಶಕ್ತಿ, ಉಬ್ಬರವಿಳಿತ ಶಕ್ತಿ, ಭೂಗರ್ಭಶಕ್ತಿ, ಜೈವಿಕ ಅನಿಲ**
10. ಕಲಿದ್ದಲಿನಿಂದ ದೊರೆಯುವ ಉಪವಸ್ತುಗಳು ಯಾವುವು?  **ಅಮೋನಿಯ, ಕೋಲ್‌ಟಾರ್, ಕೋಲ್‌ಗ್ಯಾಸ್, ಬೆಂಜಾಲ್, ನ್ಯಾಪ್ತ, ಸಲ್ಫರ್**
11. ಹೈಡ್ರೊಕಾರ್ಬನ್‌ವುಳ್ಳ ಖನಿಜತೈಲ ಯಾವುದು?  **ಪೆಟ್ರೋಲಿಯಂ**
12. ಭಾರತದಲ್ಲಿ ಪೆಟ್ರೋಲಿಯಂ ನಿಕ್ಷೇಪವನ್ನು ಮೊಟ್ಟಮೊದಲಿಗೆ ಎಲ್ಲಿ ಕಂಡುಹಿಡಿಯಲಾಯಿತು.?  **'ಮಾಕುಂ'**
13. ಭಾರತದಲ್ಲಿ ಮೊಟ್ಟಮೊದಲಿಗೆ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರವನ್ನು ಎಲ್ಲಿ ತಯಾರಿಸಲಾಯಿತು?  **ಡಾರ್ಜಲಿಂಗ್**
14. ಕರ್ನಾಟಕದ ಪ್ರಮುಖ ಜಲವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳನ್ನು ಹೆಸರಿಸಿ

 **ಶಿವನಸಮುದ್ರ, ಶರಾವತಿ, ಲಿಂಗನಮಕ್ಕಿ, ಆಲಮಟ್ಟಿ, ಕಾಳಿ ಮತ್ತು ಭದ್ರ**

15. ಪರಮಾಣುಶಕ್ತಿ ಎಂದರೇನು?  **ಪರಮಾಣು ಖನಿಜಗಳಿಂದ ತಯಾರಿಸುವ ವಿದ್ಯುಚ್ಛಕ್ತಿಯನ್ನು ಪರಮಾಣುಶಕ್ತಿ ಎನ್ನುವರು.**
16. ಜಲ ವಿದ್ಯುಚ್ಛಕ್ತಿ ಎಂದರೇನು?

 **ಧುಮುಕುವ ನೀರಿನ ರಭಸದಿಂದ ಉತ್ಪಾದಿಸುವ ವಿದ್ಯುತ್‌ನ್ನು ಜಲ ವಿದ್ಯುಚ್ಛಕ್ತಿ ಎಂದು ಕರೆಯಲಾಗಿದೆ**

## ಅಧ್ಯಾಯ-10 ಭಾರತದ ಕೈಗಾರಿಕೆಗಳು

**I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರ್ತಗಳಿಂದ ಭರ್ತಿ ಮಾಡಿರಿ.**

1. ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆಯು ________ ರಾಜ್ಯದಲ್ಲಿದೆ. (**ಕರ್ನಾಟಕ**)
2. ಬಾಕ್ಸೈಟ್ ಅದಿರು ________ ಕೈಗಾರಿಕೆಯ ಪ್ರಮುಖ ಕಚ್ಚಾ ವಸ್ತು. (**ಅಲ್ಯೂಮಿನಿಯಂ**)
3. ಭಾರತದ ಅರಣ್ಯ ಆಧಾರಿತ ಕೈಗಾರಿಕೆ ________ ಆಗಿದೆ. (**ಕಾಗದ ಕೈಗಾರಿಕೆ**)
4. ಭಾರತದ ಪ್ರಥಮ ಆಧುನಿಕ ಕಾಗದ ಕೈಗಾರಿಕೆಯು 1932ರಲ್ಲಿ ________ ಎಂಬಲ್ಲಿ ಸ್ಥಾಪನೆಗೊಂಡಿತು (**ಸೆರಾಂಪುರ**)

**II. ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

1. ಕೈಗಾರಿಕೆ ಎಂದರೇನು?

 **ಕಚ್ಚಾ ವಸ್ತುಗಳನ್ನು ಹೆಚ್ಚು ಉಪಯುಕ್ತ ವಸ್ತುಗಳಾಗಿ ಪರಿವರ್ತಿಸುವ ಪ್ರಕ್ರಿಯೆಯನ್ನು ಕೈಗಾರಿಕೆ ಎನ್ನುವರು**

2. 'ಕೈಗಾರಿಕಾ ಪ್ರದೇಶ' ಎಂದರೇನು?

 **ಒಂದೇ ಬಗೆಯ ಅಥವಾ ವಿವಿಧ ಬಗೆಯ ಕೈಗಾರಿಕೆಗಳು ಅಧಿಕ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ಪ್ರದೇಶವನ್ನು 'ಕೈಗಾರಿಕಾ ಪ್ರದೇಶ' ಎನ್ನುವರು**

3. ಕಬ್ಬಿಣದ ಅದಿರು ಕರಗಿಸುವ ಮತ್ತು ಕಬ್ಬಿಣ ತಯಾರಿಸುವ ಕಲೆ ಭಾರತೀಯರಿಗೆ ಪ್ರಾಚೀನಕಾಲದಿಂದಲೂ ತಿಳಿದಿತ್ತು.ಹೇಗೆ?

 **ಇದಕ್ಕೆ ದೆಹಲಿಯಲ್ಲಿರುವ ಕಬ್ಬಿಣದ ಸ್ತಂಭವು ಉತ್ತಮ ಉದಾಹರಣೆಯಾಗಿದೆ.**

4. ಭಾರತದಲ್ಲಿ ಮೊಟ್ಟಮೊದಲಿಗೆ ಆಧುನಿಕ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಎಲ್ಲಿ ಸ್ಥಾಪನೆಗೊಂಡಿತು?  **ಪಶ್ಚಿಮ ಬಂಗಾಳದ ಕುಲ್ಟಿ**
5. ,ಭಾರತದ ಕಾಟನೊಪೊಲೀಸ್' ಮತ್ತು 'ಭಾರತದ ಮಾಂಚೆಸ್ಟರ್' ಎಂದು ಯಾವ ನಗರವನ್ನು ಕರೆಯಲಾಗಿದೆ?  **ಮುಂಬಯಿ**
6. ಮುಂಬಯಿಯನ್ನು ,ಭಾರತದ ಕಾಟನೊಪೊಲೀ‘‘ ಮತ್ತು 'ಭಾರತದ ಮಾಂಚೆ‘ರ್' ಎಂದು ಏಕೆ ಕರೆಯುವರು?

 **ಮುಂಬಯಿ ನಗರವು ಪ್ರಸಿದ್ಧ ಹತ್ತಿ ಜವಳಿ ಉತ್ಪಾದನಾ ಕೇಂದ್ರ ಆದ್ದರಿಂದ ಮುಂಬಯಿಯನ್ನು ,ಭಾರತದ ಕಾಟನೊಪೊಲೀಸ್' ಮತ್ತು 'ಭಾರತದ ಮಾಂಚೆಸ್ಟರ್' ಎಂದು ಕರೆಯುವರು.**

7. ದೇಶದಲ್ಲಿ ಪ್ರಥಮ ಆಧುನಿಕ ಕಾಗದ ಕೈಗಾರಿಕೆಯು ಎಲ್ಲಿ ಸ್ಥಾಪನೆಗೊಂಡಿತು?  **ಸೆರಾಂಪುರ**
8. ವಾಸ್ತವ ಯಶಸ್ವಿ ಕಾಗದ ಕಾರ್ಖಾನೆಯೊಂದು ಎಲ್ಲಿ ಸ್ಥಾಪನೆಗೊಂಡಿತು?  **ಬಾಲಿಯಲ್ಲಿ**
9. ಭಾರತದ 'ಸಿಲಿಕಾನ್ ವ್ಯಾಲಿ' ಎಂದು ಯಾವ ನಗರವನ್ನು ಕರೆಯಲಾಗಿದೆ?  **ಬೆಂಗಳೂರು**
10. ಬೆಂಗಳೂರನ್ನು ಭಾರತದ ಸಿಲಕಾನ್ ವ್ಯಾಲಿ' ಎಂದು ಏಕೆ ಕರೆಯುವರು?  **ಭಾರತದಲ್ಲಿ ಬೆಂಗಳೂರು ಸಾಫ್ಟ್‌ವೇರ್ ಕೈಗಾರಿಕೆಯಲ್ಲಿ ಅತ್ಯಂತ ಮಹತ್ವವುಳ್ಳದ್ದು. ಆದ್ದರಿಂದ ಬೆಂಗಳೂರನ್ನು ಭಾರತದ 'ಸಿಲಕಾನ್ ವ್ಯಾಲಿ' ಎಂದು ಕರೆಯುವರು**

## ಅಧ್ಯಾಯ-12 ಭಾರತದ ಜನಸಂಖ್ಯೆ

I. ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರ್ತಗಳಿಂದ ಭರ್ತಿಮಾಡಿ.

1. 2011ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ ________ ಕೋಟಿಗಳಾಗಿತ್ತು. (**121.01**)
2. ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಶೇ. ________ ಭಾಗ, ಭಾರತದಲ್ಲಿದೆ. (**17.5**)
3. ಭಾರತದ ಜನಭರಿತವಾದ ರಾಜ್ಯ ________ . (**ಉತ್ತರ ಪ್ರದೇಶ**)
4. ಕೇಂದ್ರಾಡಳಿತ ಪ್ರದೇಶಗಳಲ್ಲಿ ________ ಅತಿ ಕಡಿಮೆ ಜನಸಂಖ್ಯೆ ಹೊಂದಿದೆ. (**ಲಕ್ಷ ದ್ವೀಪ**)
5. ಭಾರತದ ಅತಿ ಕಡಿಮೆ ಜನಸಾಂದ್ರತೆಯುಳ್ಳ ರಾಜ್ಯ ________ ಆಗಿದೆ. (**ಅರುಣಾಚಲ ಪ್ರದೇಶ**)

II. ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. 2011ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ ಎಷ್ಟು?

 **2011ರ ಜನಗಣತಿಯಂತೆ ಭಾರತದ ಒಟ್ಟು ಜನಸಂಖ್ಯೆ 121.01 ಕೋಟಿ.**

2. ಭಾರತದಲ್ಲಿ ಅಧಿಕ ಜನಸಂಖ್ಯೆಯುಳ್ಳ ರಾಜ್ಯ ಯಾವುದು?  **ಉತ್ತರ ಪ್ರದೇಶ**
3. ಭಾರತದಲ್ಲಿ ಕಡಿಮೆ ಜನಸಂಖ್ಯೆಯುಳ್ಳ ರಾಜ್ಯ ಯಾವುದು?  **ಸಿಕ್ಕಿಂ**
4. ಭಾರತದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಧಿಕ ಜನಸಂಖ್ಯೆಯುಳ್ಳ ರಾಜ್ಯ ಯಾವುದು?  **ದೆಹಲಿ**
5. ಭಾರತದ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಡಿಮೆ ಜನಸಂಖ್ಯೆಯುಳ್ಳ ರಾಜ್ಯ ಯಾವುದು?  **ಲಕ್ಷ ದ್ವೀಪ**
6. 'ಜನಸಾಂದ್ರತೆ' ಎಂದರೇನು?  **ಪ್ರತಿ ಚದರ ಕಿಲೋಮೀಟರ್‌ನಲ್ಲ ವಾಸಿಸುವ ಜನರ ಸಂಖ್ಯೆಗೆ 'ಜನಸಾಂದ್ರತೆ' ಎಂದು ಕರೆಯಲಾಗಿದೆ.**

7. 2011ರ ಜನಗಣತಿ ಯಂತೆ ಭಾರತದ ಸರಾಸರಿ ಜನಸಾಂದ್ರತೆ ಎಷ್ಟು?
 **2011 ರ ಜನಗಣತಿ ಯಂತೆ ಭಾರತದ ಸರಾಸರಿ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ 382 ಜನರು**
8. ಭಾರತದಲ್ಲಿ ಅತಿ ಹೆಚ್ಚು ಜನಸಾಂದ್ರತೆ ಹೊಂದಿದ ರಾಜ್ಯ ಯಾವುದು?  **ಬಿಹಾರ**
9. ಭಾರತದಲ್ಲಿ ಕಡಿಮೆ ಜನಸಾಂದ್ರತೆ ಹೊಂದಿದ ರಾಜ್ಯ ಯಾವುದು?  **ಅರುಣಾಚಲ ಪ್ರದೇಶ**
10.ಜನಸಂಖ್ಯೆ ಎಂದರೇನು?  **ನಿಗದಿತದ ಪ್ರದೇಶವೊಂದರಲ್ಲ ವಾಸಿಸುವ ಜನರ ಒಟ್ಟು ಸಂಖ್ಯೆಗೆ ಜನಸಂಖ್ಯೆ ಎನ್ನುವರು**

# ಅರ್ಥಶಾಸ್ತ್ರ

## ಅಧ್ಯಾಯ – 2 ಗ್ರಾಮೀಣ ಅಭಿವೃದ್ಧಿ

**I. ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**
1. 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು__________ **(ಮಹಾತ್ಮ ಗಾಂಧೀಜಿ)**
2. ಸಂವಿಧಾನದ 73 ನೆಯ ತಿದ್ದುಪಡಿಯ ಪ್ರಕಾರ ಭಾರತದಲ್ಲಿ _________ ಹಂತದ ಪಂಚಾಯಿತ್ತಿಗಳು ಅಸಿತ್ವಕ್ಕೆ ಬಂದಿವೆ. **(ಮೂರು)**
3. ಪಂಚಾಯತ್ ಸಂಸ್ಥೆಗಳು _______ ತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತವೆ. **(ವಿಕೇಂದ್ರೀಕರಣ)**
4. ಗ್ರಾಮೀಣ ಬಡಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು _______ ಗಳನ್ನು ಅಸಿತ್ವಕ್ಕೆ ತರಲಾಗಿದೆ. **(ಮಹಿಳಾ ಸ್ವಸಹಾಯ ಸಂಘ)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**
1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.
 **ಗ್ರಾಮೀಣ ಜನರ ಜೀವನದ ಗುಣಮಟವನ್ನು ಉತಮ್ತಪಡಿಸುವ ಗ್ರಾಮೀಣ ಪ್ರದೇಶಗಳ ಏಳ್ಗೆಯನ್ನು ಗ್ರಾಮೀಣ ಅಭಿವೃದ್ಧಿಯೆಂದು ಕರೆಯುವರು.**
2. ವಿಕೇಂದ್ರೀಕರಣ ಎಂದರೇನು?  **ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದನ್ನು ವಿಕೇಂದ್ರೀಕರಣ ಎನ್ನುತ್ತೇವೆ.**
3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.  **ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ**

4. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.
 **'ಪ್ರಧಾನ ಮಂತ್ರಿ ಆವಾಸ್ ಯೋಜನೆ', 'ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ', 'ಆಶ್ರಯ ಯೋಜನೆ'**

5. 'ಭಾರತದ ನೈಜ ಅಭಿವೃದ್ಧಿಯೆಂದರೆ, ಗ್ರಾಮಗಳ ಅಭಿವೃದ್ಧಿ' ಎಂದವರು ಯಾರು?  **ಮಹಾತ್ಮ ಗಾಂಧೀಜಿ**

6. 2011ರ ಜನಗಣತಿಯ ಪ್ರಕಾರ ಎಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ?
 **2011ರ ಜನಗಣತಿಯ ಪ್ರಕಾರ ಶೇ.68.84ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ**
7. ಗ್ರಾಮೀಣ ಹಿಂದುಳಿಯುವಿಕೆಗೆ ಅತ್ಯಂತ ಪ್ರಮುಖ ಕಾರಣವೇನು?
 **ಕೃಷಿಯ ಸ್ಥಗಿತತೆ ಮತ್ತು ನಿಧಾನಗತಿಯ ಬೆಳವಣಿಗೆಯು ಗ್ರಾಮೀಣ ಹಿಂದುಳಿಯುವಿಕೆಗೆ ಅತ್ಯಂತ ಪ್ರಮುಖ ಕಾರಣವಾಗಿದೆ.**

8. ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಯಾವುದನ್ನು ಕರೆದರು?
 **ತಳಮಟದ್ಟ ಒದ ಯೋಜನೆ ನಿರೂಪಿಸುವಿಕೆ ಮತ್ತು ಅಭಿವೃದ್ಧಿ ಸಾಧನೆಯ ಪ್ರಕ್ರಿಯೆಯೂ ಇದಾಗಿದೆ. ಇದನ್ನೇ ಗಾಂಧೀಜಿಯವರು 'ಗ್ರಾಮಸ್ವರಾಜ್ಯ' ಎಂದು ಕರೆದಿದ್ದರು.**

9. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಏಕೆ ಪುನರುಜ್ಜೀವನ ಮಾಡಲಾಗಿದೆ?
 **ವಿಕೇಂದ್ರೀಕರಣವನ್ನು ಪ್ರೋತ್ಸಾಹಿಸುವುದಕ್ಕಾಗಿ ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಪುನರುಜ್ಜೀವನ ಮಾಡಲಾಗಿದೆ**

10. ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಯಾವಾಗ ಅಸ್ಥಿತ್ವಕ್ಕೆ ಬಂದವು?  **1993**

11. ಸಂವಿಧಾನದ ಯಾವ ತಿದ್ದುಪಡಿ ಕಾಯ್ದೆಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸಿತ್ವಕ್ಕೆ ತರಲಾಯಿತು?  **ಸಂವಿಧಾನದ 73ನೆಯ ತಿದ್ದುಪಡಿ ಕಾಯ್ದೆಯ ಮೂಲಕ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸಿತ್ವಕ್ಕೆ ತರಲಾಯಿತು.**


DEVARAJU CE

12. ಕರ್ನಾಟಕದಲ್ಲಿ ಎಷ್ಟು ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳಿವೆ?
 **ಕರ್ನಾಟಕದಲ್ಲಿ 30 ಜಿಲ್ಲಾ ಪಂಚಾಯತಿಗಳು, 176 ತಾಲೂಕ್ಲು ಪಂಚಾಯತಿಗಳು ಮತ್ತು 6,022 ಗ್ರಾಮ ಪಂಚಾಯತಿಗಳಿವೆ.**

## ಅಧ್ಯಾಯ – 3 ಹಣ ಮತ್ತು ಸಾಲ

**I. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ:**

1. ಸಾಟಿ ವಿನಿಮಯ ಪದ್ಧತಿಯಲ್ಲಿ ವಸ್ತುಗಳ ಬದಲಿಗೆ ________ ವಿನಿಮಯ ಮಾಡಲಾಗುತ್ತಿತ್ತು.**(ವಸ್ತು)**
2. ಚೆಕ್‌ಗಳು ............... ಹಣದ ಸಾಧನವಾಗಿವೆ.**(ಬ್ಯಾಂಕ್)**
3. ಭಾರತೀಯ ರಿಜರ್ವ್ ಬ್ಯಾಂಕು ಸ್ಥಾಪನೆಯಾದ ವರ್ಷ __________.**(1935)**
4. ಜಪಾನ್ ದೇಶದ ಹಣವನ್ನು _______ ಎಂದು ಕರೆಯುತ್ತೇವೆ.**(ಯೆನ್)**
5. ಭಾರತ ಸರ್ಕಾರ 14 ವಾಣಿಜ್ಯ ಬ್ಯಾಂಕುಗಳನ್ನು ............... ರಲ್ಲಿ ರಾಷ್ಟ್ರೀಕರಿಸಿತು.**(1969)**
6. ಕಿರಿದಾದ ಹಣದ ಪೂರೈಕೆಯನ್ನು _____ ಮತ್ತು _____ ಮೂಲಕ ಅಳೆಯುತ್ತೇವೆ. **(M1 ಮತ್ತು M2)**
7. ಹಣದುಬ್ಬರವು ಹಣದ ಪೂರೈಕೆಯು ಸರಕು–ಸೇವೆಗಳ ಪೂರೈಕೆಗಿಂತ ____ ಇದ್ದಾಗ ಸಂಭವಿಸುತದ್ದೆ.**(ಜಾಸ್ತಿ)**

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ**

1. ಹಣ ಎಂದರೇನು?
 **ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಇತರೆ ವಾಣಿಜ್ಯಿಕ ಸಾಲವನ್ನು ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ'.**
2. ಸಾಟಿ ವಿನಿಮಯ ಪದ್ಧತಿ ಎಂದರೇನು?
 **ಪುರಾತನ ಕಾಲದಲ್ಲಿ ಜನರು ಹಣವನ್ನು ಬಳಸದೆ ಸರಕುಗಳನ್ನು ಸರಕುಗಳಿಗೆ ವಿನಿಮಯ ಮಾಡಿಕೊಳ್ಳುವುದು.**
3. ವಸ್ತು ರೂಪದ ಹಣಕ್ಕೆ ಉದಾಹರಣೆ ಕೊಡಿ.  **ಗ್ರೀಸ್‌ನಲ್ಲಿ ಜಾನುವಾರುಗಳು; ರೋಮ್‌ನಲ್ಲಿ ಕುರಿಗಳು, ಚೀನಾದಲ್ಲಿ ಹಲ್ಲುಗಳು**
4. ಕಾಗದದ ಹಣಕ್ಕೆ ಉದಾಹರಣೆ ಕೊಡಿ.
 **ಭಾರತದ ರೂಪಾಯಿ, ಅಮೇರಿಕದಲ್ಲಿ ಡಾಲರ್, ಇಂಗ್ಲೆಂಡಿನಲ್ಲಿ ಪೌಂಡ್, ಜಪಾನ್‌ನಲ್ಲಿ ಯೆನ್, ಚೀನಾದಲ್ಲಿ ಯುವಾನ್**
5. ಬ್ಯಾಂಕ್ ಹಣಕ್ಕೆ ಉದಾಹರಣೆ ಕೊಡಿ.  **ಚೆಕ್ಕುಗಳು, ಡ್ರಾಫ್ಟ್‌ಗಳು, ಠೇವಣಿ ರಸೀದಿ**
6. ಪ್ಲಾಸ್ಟಿಕ್ ಹಣಕ್ಕೆ ಉದಾಹರಣೆ ಕೊಡಿ  **ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್**
7. 'ಬ್ಯಾಂಕಿಂಗ್' ಎಂದರೇನು?
 **'ಬ್ಯಾಂಕಿಂಗ್' ಎಂದರೆ ,ಸಾಲ ನೀಡುವ ಅಥವಾ ಬಂಡವಾಳ ಹೂಡುವ ಉದ್ದೇಶಕ್ಕಾಗಿ ಸಾರ್ವಜನಿಕರಿಂದ ಹಣವನ್ನು ಠೇವಣಿಯಾಗಿ ಸ್ವೀಕರಿಸಿ, ಬೇಡಿಕೆ ಅಥವಾ ಇತರೆ ಆಧಾರದ ಮೇಲೆ ಹಣ ಮರುಪಾವತಿಸುವುದಲ್ಲದೇ, ಚೆಕ್ಕುಗಳು, ಡ್ರಾಫ್ಟುಗಳು, ಆದೇಶಗಳು ಮುಂತಾದವುಗಳ ಮೂಲಕ ಹಣ ಹಿಂಪಡೆಯುವ ಪ್ರಕ್ರಿಯೆಯೇ ಬ್ಯಾಂಕಿಂಗ್ ಆಗಿರುತ್ತದೆ'.**
8. ಭಾರತೀಯ ರಿಜರ್ವ್ ಬ್ಯಾಂಕನ್ನು ಯಾವಾಗ ಸ್ಥಾಪಿಸಲಾಯಿತು?  **1935ರ ಎಪ್ರಿಲ್ 1**
9. ಭಾರತೀಯ ರಿಜರ್ವ್ ಬ್ಯಾಂಕನ್ನು ಯಾವಾಗ ರಾಷ್ಟ್ರೀಕರಣ ಮಾಡಲಾಯಿತು?  **ಜನವರಿ 1, 1949**
10. ಭಾರತದಲ್ಲಿ ಒಂದು ರೂಪಾಯಿಯ ನೋಟನ್ನು ಯಾರು ಮುದ್ರಿಸಿ ಚಲಾಯಿಸುತ್ತಾರೆ?
 **ಒಂದು ರೂಪಾಯಿಯ ನೋಟನ್ನು ಸರ್ಕಾರದ ಪರವಾಗಿ ಆರ್‌ಬಿಐ ಮುದ್ರಿಸಿ ಚಲಾಯಿಸುತ್ತದೆ**
11. ಹಣಕಾಸು ನೀತಿ' ಎಂದರೇನು?
 **ಹಣದ ಪೂರೈಕೆ ಮತ್ತು ಸಾಲದ ಪ್ರಮಾಣ ಮತ್ತು ಬಡ್ಡಿ ದರದ ನಿಯಂತ್ರಣಕ್ಕಾಗಿ ಇರುವ ಕ್ರಮಗಳನ್ನು ಒಟ್ಟಾಗಿ 'ಹಣಕಾಸು ನೀತಿ' ಎಂದು ಕರೆಯುತ್ತೇವೆ**

12. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ ನಾಲ್ಕು ಪರಿಕಲ್ಪನೆಗಳು ಯಾವುವು?  **M1, M2, M3 ಮತ್ತು M4**
13. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ M1 ಎಂದರೇನು?
 **M1 = ಕರೆನ್ಸಿ ನೋಟುಗಳು ಮತ್ತು ನಾಣ್ಯಗಳು + ವಾಣಿಜ್ಯ ಬ್ಯಾಂಕುಗಳಲ್ಲಿರುವ ಬೇಡಿಕೆ ಠೇವಣಿಗಳು**
14. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ M2 ಎಂದರೇನು?
 **M2 = M1 + ಅಂಚೆ ಕಛೇರಿಗಳಲ್ಲಿರುವ ಉಳಿತಾಯ ಠೇವಣಿಗಳು**
15. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ M3 ಎಂದರೇನು?
 **M3 = M1 + ವಾಣಿಜ್ಯ ಬ್ಯಾಂಕುಗಳಲ್ಲಿರುವ ಮುದ್ದತ್ತು ಠೇವಣಿಗಳು**

DEVARAJU C E

16. ಭಾರತದಲ್ಲಿ ಹಣ ಪೂರೈಕೆಯಲ್ಲಿ ಬಳಸುವ M4 ಎಂದರೇನು?

 **M4 = M3 + ಅಂಚೆ ಕಛೇರಿಗಳಲ್ಲಿರುವ ಒಟ್ಟು ಠೇವಣಿಗಳು**

17. ಬೇಡಿಕೆ ಅಥವಾ ಡಿಮಾಂಡ್ ಠೇವಣಿಗಳು ಎಂದರೇನು?

 **ಖಾತೆಗಳಲ್ಲಿರುವ ಹಣವನ್ನು ಬ್ಯಾಂಕುಗಳಿಂದ ಅಲ್ಪಾವಧಿ ಸೂಚನೆ ನೀಡಿ ಅಥವಾ ಬೇಡಿಕೆಯಾಧಾರದ ಮೇಲೆ ಹೊರ ತೆಗೆಯಬಹುದಾದ್ದರಿಂದ ಇವುಗಳನ್ನು ಬೇಡಿಕೆ ಅಥವಾ ಡಿಮಾಂಡ್ ಠೇವಣಿಗಳು ಎಂದೂ ಕರೆಯುತ್ತಾರೆ.**

## ವ್ಯವಹಾರ ಅಧ್ಯಯನ

### ಅಧ್ಯಾಯ – 3 ವ್ಯವಹಾರದ ಜಾಗತೀಕರಣ

**I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಜಾಗತೀಕರಣ ಎಂದರೇನು?

 **ಸರಕು ಮತ್ತು ಸೇವೆಗಳು ಹಾಗೂ ಅಂತರರಾಷ್ಟ್ರೀಯ ಬಂಡವಾಳದ ಹರಿವು, ತೀವ್ರ ಮತ್ತು ವ್ಯಾಪಕವಾದ ತಾಂತ್ರಿಕತೆಯ ಪ್ರಸರಣಗಳ ಮೂಲಕ ವಿಶ್ವದಾದ್ಯಂತ ಹೆಚ್ಚಿನ ಪ್ರಮಾಣದ ವೈವಿಧ್ಯತೆಯ ಗಡಿಯಾಚೆಗಿನ ವ್ಯವಹಾರಗಳಿಂದಾಗಿ ಹೆಚ್ಚುತ್ತಿರುವ ದೇಶಗಳ ಅಂತರ ಸ್ವಾವಲಂಬನೆ**

2. ವಿಶ್ವ ವ್ಯಾಪಾರ ಸಂಘಟನೆ ಯಾವಾಗ ಅಸ್ತಿತ್ವಕ್ಕೆ ಬಂದಿತು?  **ಇದು 1995ರ ಜನವರಿ 1 ರಂದು ಅಸ್ಥಿತ್ವಕ್ಕೆ ಬಂದಿತು.**

3. ವಿಶ್ವ ವ್ಯಾಪಾರ ಸಂಘಟನೆ ಕೇಂದ್ರ ಕಛೇರಿ ಎಲ್ಲಿದೆ?  **ಜಿನೇವಾ**

**ಪ್ರಶ್ನೆ 1] ಬಹು ಆಯ್ಕೆಗೆ ಸಂಬಂಧಿಸಿದ ಪ್ರಶ್ನೆಗಳು**

1. ಜಾಗತೀಕರಣವು ತೀವ್ರ ಪ್ರಗತಿ ಸಾಧಿಸಿದ್ದು ಕಿಶ್ರ _____ ರಲ್ಲಿ. – **1980**

2. ಜಾಗತೀಕರಣದ ತೀವ್ರ ಪ್ರಗತಿ _______ ರಾಷ್ಟ್ರಗಳ ಆರ್ಥಿಕ ಸುಧಾರಣೆಗಳಲ್ಲಿ ಬೆಳಕು ತಂದಿತು

**– ಅಭಿವೃದ್ಧಿ ಶೀಲ ರಾಷ್ಟ್ರಗಳು**

3. ಜಾಗತೀಕರಣದಿಂದ ಈ ಸಂಸ್ಥೆಗಳ ಪಾತ್ರ ಹೆಚ್ಚಾಗಿದೆ – **ಐ.ಎಂ.ಎಫ್ ಮತ್ತು ಡಬ್ಲ್ಯು.ಟಿ.ಓ**

4. ವಿಶ್ವ ವ್ಯಾಪಾರ ಸಂಘಟನೆಯಲ್ಲಿ _ ಸದಸ್ಯ ರಾಷ್ಟ್ರಗಳಿವೆ – **149**

5. ಜಾಗತೀಕರಣ ಮುಕ್ತವ್ಯಾಪಾರ ವಲಯ ಸೃಷ್ಟಿಸುವುದು ಹೇಗೆಂದರೆ –

**ಆಮದು ಮತ್ತು ರಫ್ತು ಸುಂಕಗಳನ್ನು ನಿರ್ಮೂಲನ ಮಾಡುವುದರ ಮೂಲಕ.**

# ಧನ್ಯವಾದಗಳು

DEVARAJU C E